ಅವುಗಳಿಗೆ ಕೊಟ್ಟುಬಿಟ್ಟಿದ್ದಾರೆ. ಆದರೆ ಒಂದೂ ಕಡೆ ಬಯೋ ಗ್ಯಾಸ್ ಪ್ಲಾಂಟ್ ಶುರುವಾಗಿಲ್ಲ. ಅದನ್ನು ಯಾವಾಗ ಶುರು ಮಾಡುತ್ತಾರೆ? ಎನ್ನುವುದನ್ನು ಹೇಳಬೇಕು. ನಿಜವಾಗಿಯೂ ಬಯೋ ಗ್ಯಾಸ್ ಪ್ಲಾಂಟ್ ಮಾಡುವುದರಿಂದ ಪ್ರತಿ ವಾರ್ಡ್‌ನಲ್ಲಿರುವ ಕಸ ವಿಲೇವಾರಿಯಾಗುತ್ತದೆ. ಅದರಿಂದ ಉತ್ಪತ್ತಿಯಾಗುವ ಗ್ಯಾಸ್ ಅನ್ನು ಪವರ್ ಆಗಿ ಕನ್ವರ್ಟ್ ಮಾಡಲಾಗುವುದು ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲೂ ಕೂಡ ಪ್ಲಾಂಟ್ ಶುರುವಾಗಿಲ್ಲ. ಶುರುವಾಗುವ ಲಕ್ಷಣಗಳೂ ನನಗೆ ಕಾಣುತ್ತಿಲ್ಲ. ಈಗಾಗಲೇ ಮುಕ್ಕಾಲು ಪಾಲು ದುಡ್ಡು ಕೊಟ್ಟುಬಿಟ್ಟಿದ್ದಾರೆ. ಆದರೆ ಅವರು ನಮಗೆ ದುಡ್ಡು ಕೊಡದಿದ್ದರೆ ನಾವು ಶುರು ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದು ಏನು ಎಂದು ಹೇಳಬೇಕು.

ಅಧ್ಯಕ್ಷರು:- ಈ ಬಗ್ಗೆ ಸಚಿವರು ಸ್ಟೇಟ್‌ಮೆಂಟ್ ಇದೆಯೇ? ಇಲ್ಲದಿದ್ದರೆ ಇದನ್ನು ನಾಳೆಗೆ ಹಾಕಿಕೊಳ್ಳೋಣಬಿಡಿ.

ಅಧ್ಯಕ್ಷರು:- ಅಂತರ್ಜಲ ಕುಸಿತದ ಹಿನ್ನೆಲೆಯಲ್ಲಿ ಕೆರೆಗಳು ಒಣಗಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವ ಬಗ್ಗೆ ನಿಯಮ 69ರಡಿಯಲ್ಲಿ ನಡೆದ ಚರ್ಚೆಗೆ ಈಗ ಸರ್ಕಾರದಿಂದ ಉತ್ತರ.

7. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಗೆ ಸರ್ಕಾರದ ಉತ್ತರ

ವಿಷಯ: ರಾಜ್ಯಾದ್ಯಂತ ಅಂತರ್ಜಲ ಮಟ್ಟ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಕೆರೆಗಳು ಒಣಗಿ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೆ ವಿಪರೀತ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ,

ಬರ ಪರಿಹಾರ ಕಾರ್ಯಗಳನ್ನು ಸಮರ್ಪಕವಾಗಿ ಕೈಗೊಳ್ಳುವ ಸಲುವಾಗಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳ ಸಮ್ಮೇಳನವನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 13.10.2014 ರಂದು ನಡೆಸಲಾಯಿತು. ಸದರಿ ಸಮ್ಮೇಳನದಲ್ಲಿ ಕುಡಿಯುವ ನೀರು ಪೂರೈಕೆ ಹಾಗೂ ಜಾನುವಾರು ಸಂರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳು ಉದ್ಭವವಾಗದಂತೆ ಕ್ರಮ ಕೈಗೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

2014-15ನೇ ಸಾಲಿನಲ್ಲಿ 9 ಜಿಲ್ಲೆಗಳ 35 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ತುರ್ತು ಕುಡಿಯುವ ನೀರು ಪೂರೈಕೆ ಹಾಗೂ ಗೋ-ಶಾಲೆ ನಿರ್ವಹಣೆಗಾಗಿ ಎಸ್.ಡಿ.ಆರ್.ಎಫ್. ಅಡಿಯಲ್ಲಿ ₹ 42.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯಾದ್ಯಂತ 700 ಗ್ರಾಮಗಳಿಗೆ 1.140 ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಜಿಲ್ಲಾವಾರು ವಿವರ ಕೆಳಕಂಡಂತಿದೆ:

ಕ್ರ ಸಂ	ಜಿಲ್ಲೆ	ಗ್ರಾಮಗಳ ಸಂಖ್ಯೆ	ಟ್ಯಾಂಕರ್‌ಗಳ ಸಂಖ್ಯೆ
1	ಕೋಲಾರ	310	420
2	ಧಾರವಾಡ	12	16
3	ಬೆಂಗಳೂರು ಗ್ರಾಮಾಂತರ	39	79
4	ಮೈಸೂರು	14	14
5	ಬೆಂಗಳೂರು ನಗರ	33	220
6	ರಾಮನಗರ	35	65
7	ಚಿಕ್ಕಬಳ್ಳಾಪುರ.	257	317
	ಒಟ್ಟು	**700**	**1140**

ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು 90 ದಿನಗಳಿಗಿಂತ ಹೆಚ್ಚುವರಿಯಾಗಿ ಸರಬರಾಜು ಮಾಡಿದ್ದಕ್ಕೆ ₹ 10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ 90 ದಿನಗಳಿಗಿಂತ ಹೆಚ್ಚುವರಿಯಾಗಿ ಕುಡಿಯುವ ನೀರು ಸರಬರಾಜು ಮಾಡಿದ ಬಾಬ್ತುನ್ನು ಲಭ್ಯವಿರುವ ಜಿಲ್ಲಾದಿಕಾರಿಗಳ ಪಿ.ಡಿ.ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ರಾಜ್ಯದಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳನ್ನು ಸಂರಕ್ಷಿಸಿ ಕೆರೆ ಕಟ್ಟೆಗಳಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ನೀರಿಗಾಗಿ ಮಾತ್ರ ಬಳಕೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ. ಸಮಸ್ಯಾತ್ಮಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯನ್ನು ಬಗೆ ಹರಿಸಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಪ್ರತಿ ವಾರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಭೆ ನಡೆಸಿ ಸಮಸ್ಯೆಗಳನ್ನು ತುರ್ತಾಗಿ ಬಗೆ ಹರಿಸಲು ಸೂಚಿಸಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1 ಮತ್ತು ಬೀದರ್ ಜಿಲ್ಲೆಯಲ್ಲಿ 2 ಸೇರಿ 3 ಗೋ-ಶಾಲೆಗಳು ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಪ್ರಸ್ತುತ 18 ಮೇವು ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ ಇವುಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 6 ಮತ್ತು ಬೀದರ್ ಜಿಲ್ಲೆಯಲ್ಲಿ 12 ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದಲ್ಲಿ ಮೇವಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತ ಕ್ರಮವಾಗಿ ಮೇವು ಬೆಳೆಯಲು ಮೇವಿನ ಬೀಜದ ಮಿನಿ ಕಿಟ್ ಖರೀದಿಗಾಗಿ ₹ 5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಅಂತರ್ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಭಂದಿಸಲಾಗಿದೆ. ಹಾಗೂ ಮೇವಿನ ಪೂರೈಕೆ ಹೆಚ್ಚು ಇರುವ ಜಿಲ್ಲೆಯಿಂದ ಮೇವಿನ ಕೊರತೆಯಿರುವ ಜಿಲ್ಲೆಗೆ ಮೇವನ್ನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಅವಶ್ಯಕತೆಯಿದ್ದಲ್ಲಿ ಮೇವು ಬ್ಯಾಂಕ್ ಸ್ಥಾಪನೆ ಹಾಗೂ ಗೋ-ಶಾಲೆಗಳನ್ನು ತೆರೆಯುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ವಿ. ಶ್ರೀನಿವಾಸಪ್ರಸಾದ್ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ನಿಯಮ 69ರಡಿಯಲ್ಲಿ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬೇಸಿಗೆ ಹೆಚ್ಚಾಗುತ್ತಿದೆ, ಅಂತರ್ಜಲ ಮಟ್ಟ ಬಹಳ ಕುಸಿಯುತ್ತಿದೆ, ಕೆರೆಗಳು ಒಣಗುತ್ತಿವೆ, ಜನಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಹಾಗೂ ಜಾನುವಾರುಗಳ ಮೇವಿನ ಕೊರತೆ ಉಂಟಾಗಿದೆ. ಆದ್ದರಿಂದ, ಗೋ-ಶಾಲೆಗಳನ್ನು ತೆರೆಯುವ ಬಗ್ಗೆ ಮತ್ತು ಅಗತ್ಯ ಕುಡಿಯುವ ನೀರನ್ನು ಪೂರೈಸುವ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಕಾರಜೋಳವರು, ಶ್ರೀ ಸುರೇಶ್‌ಗೌಡರವರು, ಶ್ರೀ ಬಸವರಾಜು ಬೊಮ್ಮಾಯಿ ಇವರೆಲ್ಲರೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಇಡೀ ದಿನ ಚರ್ಚೆಯಾಯಿತು. ಇದು ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಆಯವ್ಯಯ ಮಂಡಿಸಿದ್ದಾರೆ, ಅದರ ಮೇಲೆ ಚರ್ಚೆ ಮಾಡುವಾಗ ಈ ವಿಷಯವನ್ನು ಕೂಡ ತೆಗೆದುಕೊಂಡು ಪ್ರಸ್ತಾಪ ಮಾಡಬಹುದೆಂದು ತಾವೂ ಕೂಡ ಮನವಿ ಮಾಡಿದ್ದಿರಿ. ಆದರೆ, ಇದು ತಾತ್ಕಾಲಿಕವಾದ ಸಮಸ್ಯೆಯಲ್ಲ. ಈ ಸಮಸ್ಯೆ ಪ್ರತಿ ವರ್ಷ ಬರತಕ್ಕಂಥದ್ದಾಗಿದೆ. ಬೇಸಿಗೆ ಬರುವುದಕ್ಕೆ ಮುಂಚಿತವಾಗಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಮತ್ತು ಮೇವಿನ ಸಮಸ್ಯೆ ಪರಿಹಾರದ ಸಲುವಾಗಿ ವಿಶೇಷವಾದ ಗಮನವನ್ನು ಸರ್ಕಾರದ ಕಡೆಯಿಂದ ನಾವು ಕೊಡುತ್ತೇವೆ. ಕುಡಿಯುವ ನೀರಿನ ಬಗ್ಗೆ ಜಾನುವಾರುಗಳಿಗೆ ಯಾವ ರೀತಿಯಾಗಿ ಗೋ-ಶಾಲೆಗಳನ್ನು ತೆರೆಯಬೇಕು ಎನ್ನುವ ರೀತಿಯಲ್ಲಿ ಅದರ ಬಗ್ಗೆಯೂ ಕೂಡ ನಾವು ವಿಶೇಷವಾದಂಥ ಗಮನ ಕೊಡುತ್ತೇವೆ. ಈ ಬಗ್ಗೆ ಬಹಳ ಚರ್ಚೆ ನಡೆಯಿತು. ಅದದು ಶಾಶ್ವತವಾದಂಥ ನೀರಿನ ಕಡೆಗೆ ತಿರುಗಿ ಅದು ಯಾವ ರೀತಿ ಆಯಿತು ಎನ್ನುವುದು ಗೊತ್ತಿದೆ, ಅದನ್ನು ಈಗ ಪ್ರಸ್ತಾಪ ಮಾಡುವುದಿಲ್ಲ. ನಾವೂ ಕೂಡ ಅದರ ಬಗ್ಗೆ ಸಾಕಷ್ಟು ಕಾಳಜಿ ಇರತಕ್ಕಂಥವರು. ತಾತ್ಕಾಲಿಕವಾಗಿ ಕುಡಿಯುವ ನೀರಿನ ಬಗ್ಗೆ ಮತ್ತು ಶಾಶ್ವತವಾದ ಕುಡಿಯುವ ನೀರಿನ ಬಗ್ಗೆ ಬಹಳ ಉದ್ರೇಕಗೊಂಡು ಇಲ್ಲಿ ಮಾನ್ಯ ಸದಸ್ಯರು ಮಾತನಾಡಿರುವಂಥದ್ದು ಇದೆ. ಅದರ ಬಗ್ಗೆ ನಾನು ಪ್ರಸ್ತಾಪ

ಮಾಡುವುದಿಲ್ಲ. ಆದರೂ ಕೂಡ ಪ್ರತಿ ವರ್ಷ. ಹಾಗೆ ಈಗಲೂ ಕೂಡ ಸರ್ಕಾರ ಏನು ಮಾಡಿದ್ದಾರೆಂಬುದನ್ನು, ಅದರಲ್ಲಿಯೂ ಕೂಡ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಮುಂಜಾಗ್ರತೆಯನ್ನು ವಹಿಸಿದ್ದೇವೆನ್ನುವುದರ ಬಗ್ಗೆ ತಮಗೆ ನಾನು ಕಳೆದ ವರ್ಷವೂ ಕೂಡ ಪ್ರಸ್ತಾಪ ಮಾಡಿದ್ದೆ, ಬಹುಶ: ಈ ವರ್ಷವೂ ಕೂಡ ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಇತರ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥದ್ದರ ಬಗ್ಗೆ, ಈಗಾಗಲೇ ಈ ಬರ ಪರಿಹಾರ ಕಾರ್ಯಗಳನ್ನು ನಾವು ಸಮರ್ಪಕವಾಗಿ ತೆಗೆದುಕೊಳ್ಳತಕ್ಕಂಥ ರೀತಿಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳ ಸಮ್ಮೇಳನವನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈಗಾಗಲೇ ಅಂದರೆ ಹಿಂದೆ ಅಕ್ಟೋಬರ್ ತಿಂಗಳನಲ್ಲಿಯೂ ಕೂಡ ಇದನ್ನು ನಾವು ನಿರೀಕ್ಷೆ ಮಾಡಿದ್ದೆವು, ಈ ರೀತಿ ಆಗುತ್ತದೆ, ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ಬರುತ್ತದೆ ಎಂದು ದಿನಾಂಕ: 13-10-2014ರಂದೇ ಸಭೆಯನ್ನು ನಡೆಸಲಾಯಿತು. ಆ ಸಮ್ಮೇಳನದಲ್ಲಿ ಬಹಳ ಒತ್ತಾಯ ಮಾಡಿ, ಕುಡಿಯುವ ನೀರಿನ ಪೂರೈಕೆ ಹಾಗೂ ಜಾನುವಾರ ಸಂರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳು ಉದ್ಭವವಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಕಟ್ಟುನಿಟ್ಟಿನ ಸೂಚನೆ ಆಗಲೇ ಕೊಟ್ಟಿದ್ದೆ ಜೊತೆಗೆ ಅವರಿಗೆ ಸ್ಪಷ್ಟವಾಗಿ ಹೇಳಿದ್ದೆವು, ಯಾವುದೇ ಹಣದ ಕೊರತೆ ಇಲ್ಲದಿರತಕ್ಕಂಥ ರೀತಿಯಲ್ಲಿ, ಸರ್ಕಾರ ನಿಮಗೆ ಯಾವುದೇ ತೊಂದರೆ ಇರತಕ್ಕಂಥ ರೀತಿಯಲ್ಲಿ ನೋಡಿಕೊಳ್ಳುತ್ತದೆ. ಕುಡಿಯುವ ನೀರಿನ ಸಮಸ್ಯೆ ಮತ್ತು ಜಾನುವಾರುಗಳ ಮೇವಿಗೆ ಆದ್ಯತೆ ಕೊಡಬೇಕೆನ್ನುವ ಕಟ್ಟುನಿಟ್ಟಿನ ಆದೇಶವನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ ಆಗಲೇ ಕೊಟ್ಟಿದ್ದೇವೆ. 2014-15ನೇ ಸಾಲಿನಲ್ಲೂ ಕೂಡ ನಾವು 9 ಜಿಲ್ಲೆಗಳಲ್ಲಿ 35 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದೇವೆ. ಇಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆ ಹಾಗೂ ಗೋ-ಶಾಲೆ ನಿರ್ವಹಣೆಗಾಗಿ S.D.R.F. ಅಡಿಯಲ್ಲಿ 48 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

ರಾಜ್ಯಾದ್ಯಂತ 700 ಗ್ರಾಮಗಳಿಗೆ 1,140 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗಿದೆ. ಎಲ್ಲಿ ಬೋರ್‌ವೆಲ್‌ಗಳು ಇಲ್ಲವೋ, ಎಲ್ಲಿ water sources ಇಲ್ಲವೋ ಅಲ್ಲೆಲ್ಲ ಕೂಡ ಇಲ್ಲದೇ ಇರತಕ್ಕಂಥ ಸಮಯದಲ್ಲಿ ಅನಿವಾರ್ಯವಾಗಿ ನಾವು ಟ್ಯಾಂಕರ್ ಮುಖಾಂತರ ನೀರನ್ನು ಕೊಡಬೇಕೆನ್ನುವ ವ್ಯವಸ್ಥೆಯನ್ನು ಕೂಡ ಈಗಾಗಲೇ ಇದರಲ್ಲಿ ಮಾಡಿದ್ದೇವೆ. ಜಿಲ್ಲಾವಾರು ಮಾಹಿತಿ ಕೂಡ ಲಿಖಿತ ಹೇಳಿಕೆಯಲ್ಲಿ ಕೊಟ್ಟಿದ್ದೇನೆ. ಸುಮಾರು 7 ಜಿಲ್ಲೆಗಳನ್ನು ಬರಪೀಡಿತ ಜಿಲ್ಲೆಗಳೆಂದು ನಾವು ಘೋಷಣೆ ಮಾಡಿದ್ದೇವೆ. ಅದರಲ್ಲಿ ಸುಮಾರು 700 ಗ್ರಾಮಗಳನ್ನು ಕೂಡ ಗುರುತು ಹಚ್ಚಿದ್ದೇವೆ. 1,140 ಟ್ಯಾಂಕರುಗಳ ಮೂಲಕ ಈಗಾಗಲೇ ಅವರಿಗೆ ನೀರನ್ನು ಕೂಡ ಕೊಟ್ಟಿದ್ದೇವೆ. ಟ್ಯಾಂಕರ್ ಮೂಲಕ ಕೊಡುವ ಕುಡಿಯುವ ನೀರು ಏನಿದೆ, 90 ದಿನಗಳಿಗಿಂತ ಹೆಚ್ಚುವರಿಯಾಗಿ ಸರಬರಾಜು ಮಾಡಿದ್ದಕ್ಕೆ ಸುಮಾರು 10 ಕೋಟಿ ರೂಪಾಯಿಗಳನ್ನು ಕೂಡ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ರಾಜ್ಯದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ 90 ದಿನಗಳಿಗಿಂತ ಹೆಚ್ಚುವರಿಯಾಗಿ ಕುಡಿಯುವ ನೀರು ಸರಬರಾಜು ಮಾಡಿದ ಬಾಬ್ತುನ್ನು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಬಳಸಿಕೊಳ್ಳಲು ಅನುಮತಿಯನ್ನು ಈಗಾಗಲೇ ಅವರಿಗೆ ನೀಡಿದ್ದೇವೆ. ರಾಜ್ಯದಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳನ್ನು ಸಂರಕ್ಷಿಸಿ ಕೆರೆ ಕಟ್ಟೆಗಳಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ನೀರಿಗಾಗಿ ಮಾತ್ರ ಬಳಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸುತ್ತೋಲೆ ಹೊರಡಿಸಿದ್ದೇವೆ. ಸಮಸ್ಯಾತ್ಮಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕಟ್ಟುನಿಟ್ಟಿನ ಕ್ರಮವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿ ವಾರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಭೆ ನಡೆಸಿ ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸಲು ಸೂಚಿಸಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1 ಮತ್ತು ಬೀದರ್ ಜಿಲ್ಲೆಯಲ್ಲಿ 2 ಸೇರಿ ಒಟ್ಟು 3 ಗೋ–ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಪ್ರಸ್ತುತ 18 ಮೇವು ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 6 ಮತ್ತು ಬೀದರ್ ಜಿಲ್ಲೆಯಲ್ಲಿ 12 ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಮೇವಿನ ಸಂಖ್ಯೆ ಉಂಟಾಗದಂತೆ ಮುಂಜಾಗ್ರತೆ ಕ್ರಮವಾಗಿ ಮೇವು ಬೆಳೆಯಲು ಮೇವಿನ ಬೀಜದ ಮಿನಿ ಕಿಟ್ ಖರೀದಿಗಾಗಿ ₹ 5.00 ಕೋಟಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಈಗಾಗಲೇ ಅಂತರ್ ರಾಜ್ಯ ಮೇವು ಸಾಗಾಣಿಕೆಯನ್ನು ಏಕೆಂದರೆ ನಮ್ಮಲ್ಲಿ ಬಹಳ ತೊಂದರೆ ಇದೆ ಎಂದು ಇದನ್ನು ನಿರ್ಬಂಧ ಮಾಡಿದ್ದೇವೆ. ಮೇವಿನ ಪೂರೈಕೆ ಹೆಚ್ಚು ಇರುವ ಜಿಲ್ಲೆಯಿಂದ ಮೇವಿನ ಕೊರತೆಯಿರುವ ಜಿಲ್ಲೆಗೆ ಮೇವನ್ನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಅವಶ್ಯಕತೆ ಇದ್ದಲ್ಲಿ ಮೇವು ಬ್ಯಾಂಕ್ ಸ್ಥಾಪನೆ ಹಾಗೂ ಗೋ-ಶಾಲೆಗಳನ್ನು ತೆರೆಯುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಮಾನ್ಯ ಅಧ್ಯಕ್ಷರೆ, ಪ್ರತಿ ವಾರವೂ ಕೂಡ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿಗಳು ಇದರ ಬಗ್ಗೆ review ಮಾಡಬೇಕು, ವಿಶೇಷವಾದ ಗಮನ ಕೊಡಬೇಕು ಮತ್ತು ಉಸ್ತುವಾರಿ ಸಚಿವರುಗಳು ಯಾರಿದ್ದಾರೆ, ಅವರೂ ಕೂಡ ವಿಶೇಷವಾದ ಗಮನ ಕೊಡಬೇಕು, Incharge Secretary ಗಳು ಕೂಡ ಗಮನ ಕೊಡಬೇಕು ಎಂದು ಹೇಳಿದ್ದೇವೆ. Vidco Conference ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳ ಸಂಪರ್ಕದಲ್ಲಿದ್ದೇವೆ. ಇದು ತಾತ್ಕಾಲಿಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಜನಜಾನುವಾರುಗಳಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದ ರೀತಿಯಲ್ಲಿ ನಾವು ವಿಶೇಷವಾದ ಆಸಕ್ತಿಯನ್ನು ವಹಿಸಿದ್ದೇವೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):- ಮಾನ್ಯ ಅಧ್ಯಕ್ಷರೆ, ಸಮಸ್ಯೆ ಇರುವ ಕಡೆಗೆ ಟ್ಯಾಂಕರುಗಳ ಮೂಲಕ ನೀರು ಸರಬರಾಜು ಮಾಡುತ್ತಿದ್ದೇವೆ ಎಂದು ವರದಿ ಕೊಟ್ಟಿರುವುದರಲ್ಲಿ ನಮ್ಮ ಜಿಲ್ಲೆಯ ಯಾವ ಸ್ಥಳವನ್ನು ಇದರಲ್ಲಿ ತೋರಿಸಿಲ್ಲ, ಕೋಲಾರ ಮತ್ತು ಕೆಲವು ಜಿಲ್ಲೆಗಳ ಹೆಸರನ್ನು ಮಾತ್ರ ತೋರಿಸಿದ್ದಾರೆ. ವಾಸ್ತವವಾಗಿ ನನ್ನ ತಾಲ್ಲೂಕಿನಲ್ಲಿಯೇ 10 ರಿಂದ 15 ಗ್ರಾಮಗಳಿಗೆ ಕುಡಿಯುವ ನೀರನ್ನು ಟ್ಯಾಂಕರುಗಳ ಮೂಲಕ supply ಮಾಡುತ್ತಿದ್ದೇವೆ. ನಿನ್ನೆಯವರೆಗೆ ನಾಗಮಂಗಲದ ಕನಿಷ್ಠ 30-40 ಗ್ರಾಮಗಳಲ್ಲಿ

borewell fail ಆಗಿದೆ ಎಂದು ಸಾಕಷ್ಟು ದಿವಸಗಳಿಂದ phone ಮೂಲಕ ದೂರುಗಳು ಬರುತ್ತಿವೆ. ಈ ಬರಪೀಡಿತ ತಾಲ್ಲೂಕುಗಳೆಂದು announce ಮಾಡುವುದರಲ್ಲಿಯೂ ಸಹಿತ ತಾರತಮ್ಯವಾಗುತ್ತಿದೆ. ವಾಸ್ತವವಾಗಿ ಮಳೆಯಾಗದಿದ್ದರೂ ಕುಡಿಯುವ ನೀರಿನ ಸಮಸ್ಯೆ ಇದ್ದರೂ ಅಥವಾ ಬೆಳೆಗಳು ಹಾನಿಯಾಗಿದ್ದರೂ ಸಹ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತಿಲ್ಲ. ನಿಮ್ಮ ಅಧಿಕಾರಿಗಳ ಬಗ್ಗೆ ನಮಗೆ ಒಂದು ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಅದು ಯಾವ parameter ಇಟ್ಟುಕೊಂಡು check ಮಾಡುತ್ತಾರೋ? ಅದು ಯಾವ ದಾಖಲೆಗಳನ್ನು ಇಟ್ಟುಕೊಂಡು check ಮಾಡುತ್ತಾರೋ ನಮಗಂತೂ ಅರ್ಥವಾಗುತ್ತಿಲ್ಲ. ದಯಮಾಡಿ, ವಾಸ್ತವವಾಗಿ ಸಮಸ್ಯೆ ಇರತಕ್ಕಂಥ ತಾಲ್ಲೂಕುಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಿಕ್ಕೆ ಹೇಳಬೇಕು. ನಾಗಮಂಗಲದಲ್ಲಿ ಏನಿದೆ ಎಂದು report ಕಳುಹಿಸುವುದಕ್ಕೆ ಹೇಳಿ. ಅದು ಯಾವ ಅಧಿಕಾರಿ ಇದ್ದಾರೋ ಅವರನ್ನು ನನ್ನ ಜೊತೆಗೆ ಕಳುಹಿಸಿಕೊಟ್ಟುಬಿಡಿ. ಆ ಪುಣ್ಯಾತ್ಮನನ್ನು ಕರೆದುಕೊಂಡು ಹೋಗಿ, ಆ ಊರಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಅಲ್ಲಿ ವಾಸ್ತವ ಸತ್ಯ ಏನಿದೆ ಎಂದು ಜನರ ಮುಂದೆ ನಿಲ್ಲಿಸಿ, ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ. ಅವರು ಯಾರು ನಿಮ್ಮ ಅಧಿಕಾರಿಗಳು state level ನಲ್ಲಿ ಈ management ಮಾಡುತ್ತಾರೆ, ನಾನು ಶಾಸಕನಾಗಿರುವುದರಿಂದ ಅವರು ನನ್ನ ಜೊತೆಯಲ್ಲಿ ಬಂದರೆ ತಪ್ಪೇನೂ ಇಲ್ಲ. ಅವರಿಗೂ ಏನೂ ಮರ್ಯಾದೆ ಹೋಗುವುದಿಲ್ಲ. ದಯವಿಟ್ಟು ನನ್ನ ಜೊತೆ ಕಳುಹಿಸಿಕೊಡಿ. ಸೀದಾ ಹಳ್ಳಿಗಳಿಗೇ ಕರೆದುಕೊಂಡು ಹೋಗಿ ತೋರಿಸುತ್ತೇನೆ. ವೈಯಕ್ತಿಕವಾಗಿ ನನ್ನದು ಒಬ್ಬನದೇ ಮಾಡಬೇಕೆಂದೇನೂ ಅಲ್ಲ. ನಾಗಮಂಗಲ ಸಾಕಷ್ಟು ಸಮಸ್ಯೆ ಎದುರಿಸಿದೆ. ಮಳವಳ್ಳಿ ಕೊನೆಯ ಭಾಗದಲ್ಲೂ ಸಮಸ್ಯೆ ಇದೆ. ಮದ್ದೂರು, ಮಂಡ್ಯದ ಕೆಲವು ಭಾಗದಲ್ಲಿ ಸಮಸ್ಯೆ ಇದೆ. ಆದರೆ, ಮಂಡ್ಯ ಎಂದ ತಕ್ಷಣವೇ ಮೈಸೂರು to Bangalore ಗೆ ಹೋಗುವಂಥ ಎರಡೂ ಕಡೆ ಬದಿಯಲ್ಲಿ first class ಆಗಿ ಭತ್ತ ಇದೆ, ಕಬ್ಬು ಇದೆ ಎಂದು ನೋಡಿಕೊಂಡು ಅಧಿಕಾರಿಗಳು ಅದನ್ನೇ ಒಂದು report ಎಂದು ಕೊಡುವುದಾದರೆ, ನಿಜವಾಗಿ ಸಮಸ್ಯೆ ಎದುರಿಸುತ್ತಿರುವವರಿಗೆ ಪರಿಹಾರ ಕೊಡುವಂಥದ್ದು ಬಹಳ

ಕಷ್ಟವಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ ನಮ್ಮ ತಾಲ್ಲೂಕಿನಲ್ಲಿ, ಮಂಡ್ಯ ಜಿಲ್ಲೆಯ ಕೆಲವು ಭಾಗದಲ್ಲಿ serious ಆಗಿ ಇದೆ. ದಯಮಾಡಿ, ತಾವು ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, CEO ಗೆ ಕಟ್ಟುನಿಟ್ಟಿನ ಆದೇಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):- ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಬರಪೀಡಿತ ಪ್ರದೇಶವೆಂದು ಗೊತ್ತಿದೆ. ಆದರೆ, ಇಲ್ಲಿ ಆ ಪ್ರದೇಶಕ್ಕೆ ಸೇರಿದ ಒಂದು ಪ್ರದೇಶವನ್ನೂ ಸಹ ಹೇಳಿಲ್ಲ. ಪಾವಗಡ, ಮಧುಗಿರಿ, ತುರುವೇಕೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ಇಲ್ಲಿ ಕುಡಿಯುವ ನೀರಿಗೆ ಬಹಳ ಬರ ಇರುವಂಥ ಸಂದರ್ಭದಲ್ಲಿ ಅದರ ಬಗ್ಗೆ ಸನ್ಮಾನ್ಯ ಸಚಿವರು ವ್ಯಾಖ್ಯಾನ ಮಾಡಿಲ್ಲ. ಯಾವ ಆಧಾರದ ಮೇಲೆ ತಾವು ಬರಗಾಲ ಪೀಡಿತ ಪ್ರದೇಶವೆಂದು declare ಮಾಡುತ್ತೀರೆಂದು ನಾನೂ ಸಹ ಕೇಳಿದ್ದೇನೆ. ಅದರ ಬಗ್ಗೆ ತಾವು reply ಮಾಡಿಲ್ಲ. ಯಾವಾಗ ನೀವು further ಸಭೆ ಕರೆದು ತೀರ್ಮಾನ ಮಾಡುತ್ತೀರಿ? ಇವತ್ತೂ ಸಹ ನನ್ನ ತಾಲ್ಲೂಕಿನಲ್ಲಿ ಕೆಲವು ಭಾಗಗಳಿಗೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಕೊಡುತ್ತಿದ್ದಾರೆ. ಅವರಿಗೆ ಹಣ ಇಲ್ಲ. ಕಳೆದ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ನೀರು ಕೊಡಲೇಬೇಕೆಂದು ನಾನು ಹೇಳಿದ್ದೇನೆ. ಕೊನೆಯ ಪಕ್ಷ immediate ಆಗಿ ಕ್ಷೇತ್ರವಾರು ಬೋರ್ ಕೊರೆಯಲಿಕ್ಕೆ, ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಿಕ್ಕೆ, ಅಥವಾ ಎಲ್ಲೆಲ್ಲಿ surface water supply ಮಾಡಲಿಕ್ಕೆ ತಾವು alloment ಕೊಡಬೇಕಾಗುತ್ತದೆ. ಅದರ ಬಗ್ಗೆ ತಾವು ಹೆಚ್ಚಿನ ಕೊಡದೇ ಇದ್ದರೆ ಸುಮ್ಮನೆ ಇದು ಕೇವಲ statement ಆಗುತ್ತದೆಯೇ ಹೊರತು ಬೇರೆ ಏನೂ ಉಪಯೋಗವಾಗುವುದಿಲ್ಲ.

ಶ್ರೀ ನಾರಾಯಣಗೌಡ (ಕೆ.ಆರ್.ಪೇಟೆ):- ಮಾನ್ಯ ಅಧ್ಯಕ್ಷರೆ, ನಮ್ಮ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನಲ್ಲೂ ಇದೇ ರೀತಿ, ನಮ್ಮ ಚೆಲುವರಾಯಸ್ವಾಮಿಯವರು ಹೇಳಿದ ಹಾಗೆ ತುಂಬಾ ಸಮಸ್ಯೆಗಳಿವೆ. ಮೂರು ಹೋಬಳಿಗಳಲ್ಲಿ ಕುಡಿಯುವ ನೀರಿಗೆ ತುಂಬಾ ಸಮಸ್ಯೆ ಇದೆ. ಅಲ್ಲೂ ಸಹ

ನಮ್ಮ ಚೆಲುವರಾಯಸ್ವಾಮಿಯವರು ಹೇಳಿದ ಹಾಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕೊರೆದಿರುವಂಥ ಬೋರ್‌ಗೂ ಸಹ ಇನ್ನೂ ಅನುದಾನ ಸಿಕ್ಕಿಲ್ಲ. ಮತ್ತೆ ಬೋರ್ ಕೊರೆಸಲಿಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ನಮ್ಮ ಕೆ.ಆರ್.ಪೇಟೆಗೂ ಸಹ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):- ಮಾನ್ಯ ಅಧ್ಯಕ್ಷರೆ, ಸುದೀರ್ಘವಾಗಿ ಚರ್ಚೆ ನಡೆದು ಸಚಿವರು ಉತ್ತರ ಕೊಟ್ಟಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕಡೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ನಾವು ಕಳೆದ ಸಾರಿ tanker ನಲ್ಲಿ ನೀರು ಸರಬರಾಜು ಮಾಡಿದ್ದಕ್ಕೆ 55 ಲಕ್ಷ ರೂಪಾಯಿಗಳು ಬಾಕಿ ಏನು ಇತ್ತು, ಅದು ಬಂದಿಲ್ಲ. 55 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡದೆ ಅವರು ಈಗ tanker ಮೂಲಕ ನೀರು ಸರಬರಾಜು ಮಾಡುತ್ತಿಲ್ಲ. ಈಗ tanker ಮೂಲಕ ನೀರು ಸರಬರಾಜು ಮಾಡಲು ಜಿಲ್ಲಾಧಿಕಾರಿಗಳು ಇನ್ನು ಅನುಮೋದನೆ ಕೊಟ್ಟಿಲ್ಲ. ನಮ್ಮನ್ನು Task Force Committee ಯ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅಲ್ಲಿ ನಾವು ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳುತ್ತೇವೆ. ನಮ್ಮಲ್ಲಿ ಏನು problem ಇದೆ, ಆ ಬಗ್ಗೆ ಸ್ಪಷ್ಟವಾದ ನಿರ್ಣಯ ಮಾಡಿ ಅದನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡುತ್ತೇವೆ. ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆಂದು ಹೇಳುತ್ತಾರೆ. ಸರ್ಕಾರದಿಂದ ಯಾವುದೇ ತರಹದ ಮಾಹಿತಿ 'ಬಂದಿಲ್ಲ', 'ಬಂದಿಲ್ಲ' ಎನ್ನುವುದು ಬಿಟ್ಟರೆ ಏನೂ ಕೊಡುವುದಿಲ್ಲ. ದಯವಿಟ್ಟು ನಮಗೆ ಹಿಂದಿನ ಬಾಕಿ ಕೊಡಬೇಕು. ಅದರ ಜೊತೆಗೆ ಈಗ tanker ನಿಂದ ನೀರು ಸರಬರಾಜು ಮಾಡಲು ದುಡ್ಡು ಬಿಡುಗಡೆ ಮಾಡಬೇಕು. ಇವರು ಏನು ಮಾಡುತ್ತಾರೆಂದರೆ, ನಾವೆಲ್ಲಾ ನೋಡಿದ್ದೇವೆ. ನಾವಂತೂ ಗ್ರಾಮದ ಎಲ್ಲಿಯೊಳಗೆ ಕೊರೆಯಬೇಕು. ಅಲ್ಲಿ ನೀರು ಬಿತ್ತು ಎಂದಾಕ್ಷಣ ಪಕ್ಕದ ಹೊಲದವನು ಇನ್ನೊಂದು ನೂರು ಅಡಿ ಅಂತರದಲ್ಲಿ borewell ಕೊರೆಸಿ ಬಿಡುತ್ತಾನೆ. ಆಗ ಈ borewell fail ಆಗಿ ಬಿಡುತ್ತದೆ. ಅದಕೋಸ್ಕರ ನೀವು ಕಡ್ಡಾಯವಾಗಿ ಹೇಳಿಬಿಡಿ. ಯಾರೇ ಆಗಲಿ,

ಗ್ರಾಮ ಪಂಚಾಯಿತಿಯ ಸರಹದ್ದಿನದಲ್ಲಿರತಕ್ಕಂಥ borewell ಗಳಿಂದ ಕುಡಿಯುವ ನೀರನ್ನು ಕೊಡಬೇಕೆಂದು ಕಡ್ಡಾಯ ಮಾಡಿ. ನೀವು ಬೇಕಾದರೆ ಅವರಿಗೆ ಇಂತಿಷ್ಟು rate ಎಂದು fix ಮಾಡಿ ಕೊಡಿ. ಸುಮ್ಮನೆ ಅಲ್ಲಿ 2-3 borewell ಗಳನ್ನು ಕೊರೆದು, ಕೊರೆದು ಹಾಳು ಮಾಡುತ್ತಿದ್ದೇವೆ. ದಯವಿಟ್ಟು ಜಿಲ್ಲಾಧಿಕಾರಿಗಳ ಹಂತದಲ್ಲಿ, ಯಾರ ತೋಟದಲ್ಲಿ ನೀರು ಇರುತ್ತದೆ, ಯಾರ ಹೊಲದಲ್ಲಿ ನೀರು ಇರುತ್ತದೆ, ಅವರು ಆ ಊರಿಗೆ ಕುಡಿಯುವುದಕ್ಕೆ ನೀರು ಕೊಡಬೇಕೆಂದು ಕಡ್ಡಾಯ ಮಾಡಿ. ಆಗ ಸರ್ಕಾರದ ಕೋಟ್ಯಾಂತರ ರೂಪಾಯಿ ದುಡ್ಡು ಉಳಿಯುತ್ತದೆ. ದಯವಿಟ್ಟು ಈ ಸಲಹೆಯನ್ನು ಸರ್ಕಾರದವರು ಪರಿಗಣಿಸಿಬೇಕೆಂದು ಮನವಿ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ):- ಮಾನ್ಯ ಅಧ್ಯಕ್ಷರೆ, ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿ ಈಗಾಗಲೇ borewell ಕೊರೆಸಿರುವುದಕ್ಕೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ ಎಂದು ಕಳೆದ ವಾರವೂ ಸಹ ನಾನು ಹೇಳಿದ್ದೆ. ಅದರ ಜೊತೆಗೆ ಸಾಕಷ್ಟು ಹಳ್ಳಿಗಳಲ್ಲಿ tanker ಗಳ ಮೂಲಕ ನೀರನ್ನು ಪೂರೈಸುತ್ತಿದ್ದರು. ಆ ಸಂಬಂಧ ಇನ್ನೂ 75 ಲಕ್ಷ ರೂಪಾಯಿಗಳು ಹಣ ಬಾಕಿ ಇದೆ. ಇಷ್ಟೊಂದು ಹಣ ಬಾಕಿ ಇರುವುದರಿಂದ ಯಾವುದೇ tanker ನವರು ನೀರು ಸರಬರಾಜು ಮಾಡಲಿಕ್ಕೆ ಮುಂದಾಗುತ್ತಿಲ್ಲ. ಈಗಲೂ ಕೂಡ ನೂರಕ್ಕಿಂತ ಹೆಚ್ಚಿನ ಹಳ್ಳಿಗಳಲ್ಲಿ borewell ಗಳನ್ನು ಕೊರೆಸಬೇಕಾಗಿದೆ. ಇದರಿಂದಾಗಿ ಕುಡಿಯುವ ನೀರಿಗೆ ನಮಗೆ ಬಹಳಷ್ಟು ಸಮಸ್ಯೆಯಾಗಿ ತೊಂದರೆಯಾಗಿದೆ. ನಾನು ಈಗಾಗಲೇ ಬೆಳಗಾವಿ ಅಧಿವೇಶನದಲ್ಲಿಯೂ ಕೂಡ ಈ ಬಗ್ಗೆ ಹೇಳಿದ್ದೇನೆ, ಕಳೆದ ವಾರವೂ ಕೂಡ ಹೇಳಿದ್ದೇನೆ. ನಮ್ಮಲ್ಲಿರತಕ್ಕಂಥ ಬಡ ಜನರು ಇಂದು 15 ರಿಂದ 20 ದಿವಸಕ್ಕೊಮ್ಮೆ ಸ್ನಾನ ಮಾಡುವಂಥ ಪರಿಸ್ಥಿತಿಯಾಗುತ್ತಿದೆ. ಈ ರೀತಿ ಇರಬೇಕಾದರೆ ಸರ್ಕಾರ ಬಹಳ ಗಂಭೀರವಾಗಿ ಇದರ ಬಗ್ಗೆ ಚಿಂತನೆ ಮಾಡಬೇಕು, ನಮಗೆ ತಕ್ಷಣ ನೀರನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಇದರ ಜೊತೆಗೆ ನಮ್ಮಲ್ಲಿ ಒಂದು ಗೋಶಾಲೆ ಸ್ಥಾಪನೆಯಾಗಿದೆ. ನಮ್ಮಲ್ಲಿ ಪೂರ್ವದಿಂದ ಪಶ್ಚಿಮಕ್ಕೆ 50 ಕಿ.ಮೀ. ಇದೆ. ಉತ್ತರ ದಿಂದ ದಕ್ಷಿಣಕ್ಕೆ 50

ಕಿ.ಮೀ. ಇದೆ. ಆದರೆ, ಇವರು ಆಂಧ್ರ ಗಡಿ ಭಾಗದಲ್ಲಿ ಕೋಣನಕುಂಟ್ಲು ಎನ್ನುವಂಥ ಗ್ರಾಮದಲ್ಲಿ ಗೋಶಾಲೆಯನ್ನು ಸ್ಥಾಪನೆ ಮಾಡಿದ್ದಾರೆ. ಆದರೆ, ಅಲ್ಲಿಗೆ ಬೇರೆ ಬೇರೆ ಕಡೆಯಿಂದ ಹಸುಗಳನ್ನು ಹೊಡೆದುಕೊಂಡು ಬರುವುದಕ್ಕೆ ಆಗುವುದಿಲ್ಲ. ನಮ್ಮ ತಾಲ್ಲೂಕಿಗೆ ಇನ್ನೂ ಮೂರು ಗೋಶಾಲೆಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಪಿ.ಆರ್. ಸುಧಾಕರಲಾಲ್ (ಕೊರಟಗೆರೆ):- ಮಾನ್ಯ ಅಧ್ಯಕ್ಷರೆ, ಕೊರಟಗೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರಿನ ಹಾಹಾಕಾರ ಬಹಳವಿದೆ. Tanker ಗಳ ಮೂಲಕ ನೀರನ್ನು ಸರಬರಾಜು ಮಾಡಲಿಕ್ಕೆ ಜನಗಳು ಮುಂದೆ ಬರುತ್ತಿಲ್ಲ. ಕಾರಣ ಏನೆಂದರೆ, ಕಳೆದ ವರ್ಷ ನೀರು ಸರಬರಾಜು ಮಾಡಿದ್ದೇವೆ, ಅದಕ್ಕೆ ಹಣ ಕೊಟ್ಟಿಲ್ಲ ಎನ್ನುವುದು ಒಂದು ಕಡೆಯಾದರೆ, ಇಂದು ಕೂಡ ಕೆಲವು ಮುಖಂಡರುಗಳಿಗೆ, ನೀವು ನೀರು ಸರಬರಾಜು ಮಾಡಿ ಎಂದು ಹೇಳಿದರೂ ಕೂಡ, ಅವರು ಸರಬರಾಜು ಮಾಡಿರುವುದಕ್ಕೂ ಕೂಡ ಹಣವನ್ನು ಕೊಡುತ್ತಿಲ್ಲ. Tanker ಮೂಲಕ ನೀರನ್ನು ಸರಬರಾಜು ಮಾಡಲಿಕ್ಕೆ ನಮ್ಮ ಭಾಗದಲ್ಲಿ 350/- ರೂಪಾಯಿ fix ಮಾಡಿದ್ದಾರೆ. ಆ ಹಣದಲ್ಲಿ tanker ಮೂಲಕ ನೀರು ಸರಬರಾಜು ಮಾಡಲಿಕ್ಕೆ ಯಾರೂ ಒಪ್ಪುತ್ತಿಲ್ಲ. ಹೀಗಾಗಿ ಅದನ್ನು ಕೂಡ ತಾವು ಹೆಚ್ಚಿಗೆ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕಂದಾಯ ಸಚಿವರು ಕುಡಿಯುವ ನೀರಿನ ವಿಚಾರದ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ನಮಗೆ tanker ಮೂಲಕ ಅಥವಾ borewell ಮೂಲಕ ನೀರು ಕೊಡಿ ಎಂದು ನಾನು ಕೇಳುವುದಿಲ್ಲ. ನಾನು ಕೇಳತಕ್ಕಂಥದ್ದು ಏನೆಂದರೆ, ಹಿಂದೆ ಬಾಗಲಕೋಟ ಮತ್ತು ಬೀದರ್ ಜಿಲ್ಲೆಗಳಲ್ಲಿ ಕೆಲವು borewell ಗಳಲ್ಲಿ ಸಣ್ಣ ಮಕ್ಕಳು ಬಿದ್ದು ಸತ್ತಿರತಕ್ಕಂಥ ಉದಾಹರಣೆಗಳನ್ನು ಇಟ್ಟುಕೊಂಡು ಇಡೀ ರಾಜ್ಯಾದ್ಯಾಂತ ಏನು ಮಾಡಿದ್ದಾರೆಂದರೆ, ಯಾರೇ ರೈತರು ತಮ್ಮ ಜಮೀನಿನಲ್ಲಿ borewell ಗಳನ್ನು

ಹಾಕಿಕೊಳ್ಳಬೇಕಾದರೆ ತಹಸೀಲ್ದಾರ್‌ಗೆ ಅರ್ಜಿ ಕೊಡಬೇಕು, ಅವರು Assistant Commissioner ಗೆ ಕಳುಹಿಸಬೇಕು, ಅಲ್ಲಿಂದ ಅವರು DC ಗೆ ಹೋಗಬೇಕು. DC ಅವರು ಅಲ್ಲೊಂದು ಅದಕ್ಕೆ Committee ಮಾಡಿದ್ದಾರೆ.

ಅಧ್ಯಕ್ಷರು:– ಈಗ ಕುಡಿಯುವ ನೀರಿನ ಸಮಸ್ಯೆ ಏನಾಗಿದೆ, ಅದಕ್ಕೆ ಏನು ಪರಿಹಾರ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅದಕ್ಕೆ ನಾನು ಬರುತ್ತಿದ್ದೇನೆ. ಕುಡಿಯುವ ನೀರಿನ ವಿಚಾರವನ್ನೇ ನಾನು ಹೇಳುತ್ತಿರುವುದು. ಇದು ಕುಡಿಯುವ ನೀರಿಗೆ ಸಂಬಂಧಪಟ್ಟಿದ್ದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನ ಗ್ರಾಮದಲ್ಲಿ ವಸತಿ ಇರತಕ್ಕಂಥದ್ದು ಕಡಿಮೆ. ಬಹಳಷ್ಟು ಜನ ತೋಟಗಳಲ್ಲಿ ಇಂದು ವಾಸ್ತವ್ಯ ಮಾಡುತ್ತಿದ್ದಾರೆ. ಅವರಿಗೆ ತಮ್ಮ ಹೊಲದಲ್ಲಿ ತಾವು borewell ಗಳನ್ನು ಹಾಕಿಕೊಂಡು ತಮ್ಮ ನೀರನ್ನು ತಾವು ಪಡೆಮುಕೊಳ್ಳಬೇಕೆಂದರೂ ಸಹಿತ ಇಂದು ಜಿಲ್ಲಾಧಿಕಾರಿಗಳ ಹತ್ತಿರ ಹೋಗಬೇಕು. ಕನಿಷ್ಟ 2–3 ತಿಂಗಳಾದರೂ ಅವರಿಗೆ ಪರವಾನಿಗೆ ಸಿಗುವುದಿಲ್ಲ. ಹೀಗಾಗಿ ನಾವು ನಮ್ಮ ಹೊಲದಲ್ಲಿ ನಮ್ಮ borewell ಗಳನ್ನು ಹಾಕಿಕೊಂಡು ನಮ್ಮ ನೀರನ್ನು ನಾವು ಕುಡಿಯುತ್ತೇವೆಂದರೂ ಸಹಿತ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ. ಅದಕ್ಕೆ ನನ್ನ ವಿನಂತಿ ಏನೆಂದರೆ, ಆ ಜಿಲ್ಲಾಧಿಕಾರಿಗಳಿಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ನೇರವಾಗಿ ತಹಸೀಲ್ದಾರ್‌ಗಳಿಗೆ ಕೊಡಿ. ತತಕ್ಷಣ ಅಲ್ಲಿ ಏನಾದರೂ ಒಪ್ಪಿಗೆ ಪಡೆದುಕೊಂಡು ನಮ್ಮ ಹೊಲಗಳಲ್ಲಿ ನಾವು borewellಗಳನ್ನು ಹಾಕಿಕೊಳ್ಳುವುದಕ್ಕೆ ಆಗ ಸಾಧ್ಯವಾಗುತ್ತದೆ. ತಾವು ದಯಮಾಡಿ ಇದನ್ನು serious ಆಗಿ ತೆಗೆದುಕೊಳ್ಳಬೇಕು. ಇಲ್ಲವೆಂದರೆ 2–3 ತಿಂಗಳುಗಳ ಕಾಲ ವಿಳಂಬವಾಗುತ್ತದೆ. ಜಿಲ್ಲಾಧಿಕಾರಿಗಳು ಸಭೆ ಕರೆಯುವುದಿಲ್ಲ, ಅವರು permission ಕೊಡುವುದಿಲ್ಲ. ಕೇಳಿದರೆ, ನಮಗೆ time ಇಲ್ಲ, ಆ meeting, ಈ meeting ಎನ್ನುತ್ತಾರೆ, ನಿಮ್ಮ conference ನೊಳಗೆ ಅವರ ಸಮಯ ಹೋಗುತ್ತದೆ. ಇದರ ಸಲುವಾಗಿ ನಾನು ಕೇಳತಕ್ಕಂಥದ್ದು, ಜಿಲ್ಲಾಧಿಕಾರಿಗಳಿಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ನೇರವಾಗಿ

ನೀವು ತಹಸೀಲ್ದಾರ್‌ಗೆ ಕೊಡಿ. ಇಲ್ಲವೆಂದರೆ ನಮಗೆ ನೀರನ್ನು ತುರ್ತಾಗಿ ಸದ್ಬಳಕೆ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ. ಅದಕ್ಕೆ ದಯಮಾಡಿ ಆ ಒಂದು ಅಧಿಕಾರವನ್ನು ಅವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ):– ಮಾನ್ಯ ಅಧ್ಯಕ್ಷರೆ, ಈಗ ಸನ್ಮಾನ್ಯ ಸಚಿವರು ಉತ್ತರ ಕೊಡುವಾಗ, ಮೇವಿನ ಬೆಳೆ ಬೆಳೆಯಲಿಕ್ಕೆ 5 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆಂದು ಹೇಳುತ್ತಾರೆ. ಮೊದಲೇ ಅಲ್ಲಿ ಬರಗಾಲ ಇದೆ, ಹೀಗಾಗಿ ಅಲ್ಲಿ ಮೇವು ಬೆಳೆಯಲಿಕ್ಕೆ ಸಾಧ್ಯವಿಲ್ಲ. ಆ 5 ಕೋಟಿ ರೂಪಾಯಿಗಳನ್ನು ಮೇವು ಖರೀದಿಗಾದರೂ ಬಳಸಲು ನೀವು ಆದೇಶ ಮಾಡಿ ಎನ್ನುವುದು ಒಂದು ಸಲಹೆ. ಎರಡನೆಯದು, ನೀವು ಯಾವ ತಾಲ್ಲೂಕನ್ನು ಬರಗಾಲ ಎಂದು ಮಾಡಿದ್ದೀರೋ ಘೋಷಣೆ ಅಲ್ಲಿಗೆ ಮಾತ್ರ Task Force ಗೆ ದುಡ್ಡು ಕೊಡುತ್ತಿದ್ದೀರಿ. ಉಳಿದ ಯಾವುದೇ ತಾಲ್ಲೂಕಿಗೆ ಕೊಡುತ್ತಿಲ್ಲ. ನಾವು ಏನು ಹೇಳುತ್ತೇವೆಂದರೆ, ಎಲ್ಲಿ ತೀವ್ರವಾಗಿ ನೀರಿನ ಕೊರತೆ ಇದೆ, ಆ ತಾಲ್ಲೂಕಿಗೂ ಹಣ ವಿನಿಯೋಗ ಮಾಡಲೇಬೇಕು. ಬರಗಾಲ ಇದ್ದಲ್ಲಿ ಎರಡು ಕೋಟಿ ರೂ. ಕೊಟ್ಟರೆ ಇಲ್ಲಿ atleast ಒಂದು ಕೋಟಿ ರೂ. ಹಣ ಕೊಡತಕ್ಕಂಥ ಆದೇಶ ಸನ್ಮಾನ್ಯ ಸಚಿವರು ಮಾಡಬೇಕು. ಮಾಡಬೇಕು. ಈಗಾಗಲೇ ರಾಜ್ಯದಲ್ಲಿ ಗೋಶಾಲೆಗಳು ಇವೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿಯೂ ಗೋಶಾಲೆ ಇದೆ. ಮೇವು ಖರೀದಿಸಲಿಕ್ಕೆ ದುಡ್ಡು ಇಲ್ಲ. ಮೇವು ಬೆಳೆಯಲಿಕ್ಕೆ 5 ಕೋಟಿ ಏನು ಮೀಸಲಿಟ್ಟಿದ್ದೀರಿ, ಅದನ್ನು ಮೇವು ಖರೀದಿಗಾಗಿ transfer ಮಾಡಲಿಕ್ಕೆ ಸ್ಪಷ್ಟವಾದ ಆದೇಶ ಮಾನ್ಯ ಸಚಿವರಿಂದ ಆಗಬೇಕು.

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಯಾವುದೇ ರೀತಿಯಾದಂಥ ಅನುದಾನಗಳನ್ನು ಕೊಟ್ಟಿಲ್ಲ ಮತ್ತು tanker ಮೂಲಕ ನೀರು ಸರಬರಾಜು ವಿಚಾರದಲ್ಲಿ ಸ್ಪಷ್ಟತೆ ಇಲ್ಲ. ನಮ್ಮ ಎರಡೂ ಜಿಲ್ಲೆಗಳಲ್ಲಿಯೂ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಕುಡಿಯುವ

ನೀರಿನ ಸಮಸ್ಯೆ ಈಗಾಗಲೇ ಉದ್ಭವಿಸಿದೆ. 37 ರಿಂದ 38 degree celsius ಬಿಸಿಲು ಬರುತ್ತಿದೆ. ಬಾವಿಯಲ್ಲಾ ಒಣಗಿ ಕುಡಿಯುವ ನೀರಿನ ಹಾಹಾಕಾರ ಪ್ರಾರಂಭವಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯ ಅನುದಾನ ಬಳಸಿಕೊಂಡು tanker ಗಳ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ದಯಮಾಡಿ ನಮ್ಮ ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದರಿಂದ, ಇದನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕೆನ್ನುವುದು ಮೊದಲನೆ ವಿನಂತಿ. ಎರಡನೆಯದು, ನೀವು ಈಗಾಗಲೇ ಕಾರ್ಯಪಡೆಯನ್ನು ಮಾಡಲಿಕ್ಕೆ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೀರಿ. ಅದು ಯಾವ ರೀತಿ ಇರಬೇಕು, ಸದಸ್ಯರು ಯಾರ್ಯಾರು ಇರಬೇಕು, ಹೇಗೆ ಇರಬೇಕೆಂದು ಆ ಕಾರ್ಯಪಡೆಯ ಸುತ್ತೋಲೆ ಬಂದಿದೆ. ಆ ಕಾರ್ಯಪಡೆಗೆ ನೀವು ಎಷ್ಟು ಅನುದಾನ ಕೊಡುತ್ತೀರಿ? ಎಂದು ಎಲ್ಲೂ ಕೂಡ ಆ ಸುತ್ತೋಲೆಯಲ್ಲಿ ತಿಳಿಸಿಲ್ಲ. ಹೀಗಾಗಿ ತಕ್ಷಣ ಪ್ರತಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಳಕೆಗೆ ಮತ್ತು pipeline ವಿಸ್ತರಣೆ ಮಾಡಲಿಕ್ಕೆ, borewell ಗಳನ್ನು re-dig ಮಾಡಲಿಕ್ಕೆ, ಆ ಕಾರ್ಯಪಡೆಗೆ ಏನಾದರೂ ಕೂಡ ನೀವು ಅನುಮತಿ ಕೊಟ್ಟು ಅದಕ್ಕೆ ಹಣ ಕೊಟ್ಟರೆ ಅನುಕೂಲವಾಗುತ್ತದೆ. ತಕ್ಷಣ ಕಾರ್ಯಪಡೆಗೆ ವಿಶೇಷ ಅನುದಾನ ಕೊಡುವುದಕ್ಕೆ ಅದನ್ನು ಸೇರಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್. ಚಿಕ್ಕಮಾದು (ಹೆಚ್.ಡಿ. ಕೋಟೆ):– ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ 5 ಹೋಬಳಿಗಳಿದ್ದು 4 ಹೋಬಳಿಗಳಲ್ಲಿ ಕುಡಿಯುವ ನೀರಿಗೆ ಅಂಥ ಬರಗಾಲ ಕಾಣುವುದಿಲ್ಲ. ಒಂದು ಹೋಬಳಿಯಲ್ಲಿ ಮಾತ್ರ ತೀವ್ರ ಬರಗಾಲವಿದೆ. ಒಂದು ತಾಂತ್ರಿಕ ದೋಷ ಏನಿದೆ ಎಂದರೆ, ಮಾನ್ಯ ಸಚಿವರು, ನಮ್ಮಲ್ಲಿ ಸಾಕಷ್ಟು ಹಣವಿದೆ borewell ಕೊರೆಯುವುದಕ್ಕೆ ಹಣ ಕೊಡುತ್ತೇವೆಂದರು. ಹಾಲಿ ಇರುವ borewell ನಲ್ಲಿ water sources ಕಡಿಮೆಯಾಗಿ ಅಲ್ಲಿ ನೀರು ಸಿಗುವುದಿಲ್ಲ. ಅಂಥ ಕಡೆ ನೂರಿನ್ನೂರು ಅಡಿ ಕೆಳಕ್ಕೆ ಹೋದರೂ ನೀರು ದೊರಕುವುದಿಲ್ಲ. ಪಕ್ಕದಲ್ಲಿಯೇ 200–300 ಅಡಿ ಅಂತರದಲ್ಲಿ ಹೊಸ borewell ಹಾಕಿ ಹೋದಾಗ, ಆ bore well ಹಾಕಿ pipe ಹಾಕಿ line ಕೊಡಬೇಕೆಂದರೆ ಕನಿಷ್ಟ 15–20 ದಿವಸ ಹಿಡಿಯುತ್ತದೆ. ಅದಕ್ಕೆ

ಸರ್ಕಾರದವರು ಏನು ಮಾಡಬೇಕೆಂದರೆ, ಇಂಥ ಪ್ರಕರಣಗಳಲ್ಲಿ ಮತ್ತೊಂದು borewell ಕೊರೆದಂಥ ಸಂದರ್ಭದಲ್ಲಿ, ತಕ್ಷಣ ಸ್ಥಳೀಯ ಸಂಬಂಧಪಟ್ಟಂಥ ಇಲಾಖಾ ಮುಖ್ಯಸ್ಥರಿಗೆ ಆದೇಶ ಕೊಟ್ಟು, ತಕ್ಷಣದಲ್ಲಿ ಅದಕ್ಕೆ service ಕೊಟ್ಟು, ನೀರನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕು. 2013–14 ನೇ ಸಾಲಿನಲ್ಲಿ ಇದೇ ತರಹ ನೀರಿನ ಅಭಾವ ಉಂಟಾಗಿ tanker ಗಳ ಮೂಲಕ ನೀರು ಪೂರೈಸಿದವರಿಗೆ ಇವತ್ತಿನವರೆಗೆ ದುಡ್ಡು ಕೊಟ್ಟಿಲ್ಲ. ಆ ಬಾಕಿ ದುಡ್ಡನ್ನು payment ಮಾಡುವವರೆಗೆ tanker ಮೂಲಕ ನೀರು ಕೊಡುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಉತ್ತರ ಕೊಟ್ಟರು. ಕೇವಲ Mysore,-Bangalore division ಗೆ ಸೀಮಿತವಾಗಿ ಉತ್ತರ ಕೊಟ್ಟಿದ್ದಾರೆ. ನಮ್ಮ ಭಾಗದ ಬಿಜಾಪುರ, ಬಾಗಲಕೋಟ, ಕೊಪ್ಪಳ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗಳಲ್ಲಿಯೂ ಸುಮಾರು 200–300 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಅಲ್ಲಿ ಸಮರ್ಪಕವಾಗಿ ವ್ಯವಸ್ಥೆಯಾಗಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ, ಅಲ್ಲಿ ಜನ ಬಂದು ಶಾಸಕರಿಗೆ, ನೀರು ಇಲ್ಲ, borewell ಒಣಗಿವೆ, ನೀರು ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಹೇಗಿದ್ದರೂ Task Force Committee ಮಾಡಿದ್ದೀರಿ. ಒಂದೊಂದು ಕೋಟಿ ರೂಪಾಯಿಗಳನ್ನು Committeeಗೆ ಬಿಡುಗಡೆ ಮಾಡಿ. ಅಲ್ಲಿಂದ ನಾವು manage ಮಾಡಲಿಕ್ಕೆ ಅನುಕೂಲವಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ Committee ಇದೆ. ಆ Committee ಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಹಾಗೆಯೇ ಗೋಶಾಲೆಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತೆರೆಯಬೇಕಾಗುತ್ತದೆ. ಅಂದರೆ, ಒಂದೊಂದು ಜಿಲ್ಲೆಗೆ 10 ಗೋಶಾಲೆಗಳನ್ನು ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಕಷ್ಟವಾಗುತ್ತದೆ. ಮೇವು ಬೆಳೆಯುವ ವ್ಯವಸ್ಥೆ ಇಲ್ಲವೆಂದು ಮಾನ್ಯ ಶಿವಾನಂದ ಪಾಟೀಲ್‌ರವರು ಈಗಾಗಲೇ ಹೇಳಿದ್ದಾರೆ. ಇವತ್ತಿನದಿವಸ ಕುಡಿಯುವುದಕ್ಕೆ ನೀರಿಲ್ಲ. ಆದ್ದರಿಂದ, ಮೇವು ಹೇಗೆ

ಬೆಳೆಯುವುದಕ್ಕೆ ಆಗುತ್ತದೆ? ಆದ್ದರಿಂದ, ನಾಬಿ ಹೇಳುವುದೇನೆಂದರೆ, ಇದಕ್ಕೆ ಇನ್ನಷ್ಟು ಹಣವನ್ನು ಸೇರಿಸಿ ಮೇವು ಬ್ಯಾಂಕ್‌ಗೆ ಹೆಚ್ಚಿನ ಹಣವನ್ನು ಕೊಟ್ಟು, ಮೇವು ಬ್ಯಾಂಕ್‌ಗಳನ್ನು ಹೆಚ್ಚು ಪ್ರಾರಂಭ ಮಾಡಿದರೆ ಮಾತ್ರ ಸಮಸ್ಯೆ ಪರಿಹಾರವಾಗುತ್ತದೆ. ಮೇವು ಬ್ಯಾಂಕ್ ಪ್ರಾರಂಭಿಸಲು ಈಗ ಸಕಾಲವಾಗಿದೆ. ಕಾರಣವೇನೆಂದರೆ, ಉತ್ತರ ಕರ್ನಾಟಕದಲ್ಲಿ ಜೋಳದ ರಾಶಿಯಾಗಿದ್ದು, ಈಗ ಕಣಿಕೆ ಸಿಗುವುದರಿಂದ ಖರೀದಿ ಮಾಡುವುದಕ್ಕೆ ಅನುಕೂಲವಿದೆ. ಆದ್ದರಿಂದ, ನಮ್ಮಲ್ಲಿಯೇ ಸಿಗತಕ್ಕಂಥದನ್ನು ಖರೀದಿ ಮಾಡಿ ಆಯಾ ಜಿಲ್ಲೆಯಲ್ಲಿಯೇ stock ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಮುಂದಿನ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಹಳ ಗಂಭೀರವಾದಂಥ ಪರಿಸ್ಥಿತಿ ಇರುತ್ತದೆ. ಆದ್ದರಿಂದ, ಇದಕ್ಕೆ ತಾವು ಕೂಡಲೇ ಹಣ ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ನಾಗರಾಜಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ಹಣ ಬಿಡುಗಡೆ ಮಾಡಿದ್ದೇವೆಂಬ ವಿಚಾರದ ಬಗ್ಗೆ ಮಾನ್ಯ ಕಂದಾಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇಲಾಖೆಯಿಂದ ಹಣ ಬಿಡುಗಡೆ ಆಗಿದ್ದರೂ ಸಹ, ಬೋರ್‌ವೆಲ್‌ಗಳನ್ನು ಕೊರೆದಂಥವರು ಬಿಲ್‌ನ್ನು ತೆಗೆದುಕೊಳ್ಳಬೇಕೆಂದರೆ 7-10 ತಿಂಗಳಾದರೂ ಸಹ ಸರ್ಕಾರದ ಕಡೆಯಿಂದ ಹಣ ಪಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಕಾರಣ ಏನೆಂದರೆ, ಬಿಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಇರತಕ್ಕಂಥ ನ್ಯೂನ್ಯತೆಗಳನ್ನು ಪರಿಪಾಲನೆ ಮಾಡತಕ್ಕಂಥದ್ದರಲ್ಲಿ ಸಂಬಂಧಪಟ್ಟ ಇಂಜಿನಿಯರ್ ಮತ್ತು ಗುತ್ತಿಗೆದಾರರುಗಳಿಗೆ ನೋವಾಗುತ್ತಿದೆ. ಬೋರ್‌ವೆಲ್ ಕೊರೆದಂಥ ಗುತ್ತಿಗೆದಾರರಿಗೆ ತಕ್ಷಣ ಪೇಮೆಂಟ್ ಆಗುವುದಕ್ಕೋಸ್ಕರ ಸರಳೀಕರಣವಾದ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ, ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ನಾವು ಹೇಳಿದರೂ ಸಹ ಯಾವುದೇ ಬೋರ್‌ವೆಲ್ ಕೊರೆಯುವ owner ಗಳು ಮುಂದೆ ಬರುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 150 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. 150 ಬೋರ್‌ವೆಲ್‌ಗಳನ್ನು

ಕೊರೆದು 10-11 ತಿಂಗಳಾಗಿದ್ದರೂ ಸಹ ಇದುವರೆಗೆ ಪೇಮೆಂಟ್ ಆಗಿಲ್ಲ. ಈಗ task force committee ಗೆಂದು 2 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಲ್ಲಿಗೆ ಹಣ ಕೊಟ್ಟಿದ್ದರೂ ಸಹ ಬಿಲ್‌ನ ಪೇಮೆಂಟ್ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ, ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗುತ್ತದೆ ಹಾಗೆಯೇ, task force committeeಗೆ ಹೊಸದಾಗಿ ಹಣ ಕೊಡುವುದರ ಮೂಲಕ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ವ್ಯವಸ್ಥೆ ಮಾಡದೆ ಇದ್ದರೆ ತುಂಬಾ ಕಷ್ಟವಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ, task force committee ಗೆ ಹಣ ಕೊಟ್ಟಾಗ ಏಕ ಕಾಲದಲ್ಲಿ programme ಮಾಡಬೇಕೆಂದು programme ಮಾಡುತ್ತಾರೆ. ಅವರು some amount ಅನ್ನು reserve ಇಟ್ಟುಕೊಂಡರೆ, ಎಲ್ಲಿ ಬೋರ್‌ವೆಲ್ faill ಆಗುತ್ತದೆ ಎಂದು ಅನಿಸುತ್ತದೆಯೋ, ಅಲ್ಲಿ ಬೋರ್‌ವೆಲ್ ಅನ್ನು ಕೊರೆಸಿ, ಪೇಮೆಂಟ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಾವು ಒಂದೇ ಸಾರಿ programme ಅನ್ನು ಮಾಡಿದ ಮೇಲೆ ಆ programme ಅನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅಥವಾ ಬೇರೆ ಕಡೆಗೆ changes ತೆಗೆದುಕೊಳ್ಳುವುದಕ್ಕೆ ತಿಂಗಳುಗಟ್ಟಲೆ process ಆಗುತ್ತದೆ. ಆದ್ದರಿಂದ, ನಮ್ಮ ಅಧಿಕರಿಗಳಿಗೆ ಸನ್ಮಾನ್ಯ ಸಚಿವರು ಸೂಚನೆಯನ್ನು ಕೊಡಬೇಕಾಗುತ್ತದೆ. Task force Committee ಗೆಂದು ಕೊಟ್ಟಂಥ ಹಣದಲ್ಲಿ discretionary fund ಎಂದು ಇಟ್ಟುಕೊಂಡು, ಎಲ್ಲಿ ಅವ್ಯವಸ್ಥೆ ಆಗುತ್ತದೆಯೋ ಅಲ್ಲಿ ಕೂಡಲೇ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ನಾವು ಹಳ್ಳಿಗಳಲ್ಲಿ ಜನರಿಗೆ ಉತ್ತರ ಹೇಳತಕ್ಕಂಥದ್ದಕ್ಕೆ ತುಂಬಾ ಕಷ್ಟವಾಗುತ್ತದೆ.

ಶ್ರೀ ಕಾಶಪ್ಪನವರ್ ವಿಜಯಾನಂದ ಶಿವಶಂಕರಪ್ಪ (ಹುನಗುಂದ):- ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಮತ್ತು ಬಿಜಾಪುರ ಅವಳಿ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ನನ್ನ ಕ್ಷೇತ್ರದ ಸೂಳಿಬಾವಿ ಎಂಬ ಗ್ರಾಮದಲ್ಲಿ ಟ್ಯಾಂಕರ್‌ನಲ್ಲಿ ನೀರು ಸರಬರಾಜು ಮಾಡುವಂಥ ವ್ಯವಸ್ಥೆ ಬಂದರೂ ಕೂಡ ಅಲ್ಲಿನ ಜಿಲ್ಲಾಡಳಿತ ಈ ಬಗ್ಗೆ ಏನೂ ಕೆಲಸ ಮಾಡುತ್ತಿಲ್ಲ.

Task force committee ಯಲ್ಲಿ ನಾವು ಸಭೆಯನ್ನು ನಡೆಸಿ ಯಾವ್ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅವ್ಯವಸ್ಥೆ ಇದೆಯೋ ಅಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೋಸ್ಕರ task force committee ಗೆ ಅನುದಾನವನ್ನು ಕೇಳಿದರೆ ದುಡ್ಡಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳಿ ಕಳುಹಿಸುತ್ತಾರೆ. ಇದು ಬಹಳಷ್ಟು ವಿಪರ್ಯಾಸವಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು task force committeeಯಲ್ಲಿರುವ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಿ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ಗೋಶಾಲೆಗಳನ್ನು ಪ್ರಾರಂಭ ಮಾಡುವುದು ಮತ್ತು ಮೇವಿನ ಅಗತ್ಯತೆ ನಮ್ಮಲ್ಲಿ ಬಹಳ ಇದೆ. ಏಕೆಂದರೆ, ಬಿಜಾಪುರ ಮತ್ತು ಅಲ್ಲಿನ ಇತರೆ ಪ್ರದೇಶಗಳಲ್ಲಿ ಬೇಸಿಗೆ ಬಂದರೆ ದನಗಳಿಗೆ ಮೇವಿನದು ಬಹಳಷ್ಟು ಅವ್ಯವಸ್ಥೆ ಆಗುತ್ತದೆ. ಆದ್ದರಿಂದ ಮಾನ್ಯ ಸಚಿವರು task force committee ಗೆ ಒಂದೊಂದು ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಯಲ್ಲಾಪುರ):– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಯಲ್ಲಾಪುರ ಹಾಗೂ ಶಿರಸಿಯ ಪೂರ್ವ ಭಾಗ ತುಂಬಾ ನೀರಿನ ಕೊರತೆ ಇರತಕ್ಕಂಥ ಪ್ರದೇಶವಾಗಿದೆ. ಈ ಪ್ರದೇಶಗಳಲ್ಲಿ ಅನೇಕ ದಿವಸಗಳಿಂದ ಕುಡಿಯುವ ನೀರಿನ ಸಮಸ್ಯೆ ಆರಂಭವಾಗಿದೆ. ಆ ಕಾರಣಕ್ಕಾಗಿ ಒಂದೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ವರ್ಷ 20 ಲಕ್ಷ ರೂ.ಗಳಿಂದ ಹೆಚ್ಚು ಕೊಟ್ಟಿರತಕ್ಕಂಥ ಹಣ ಜಿಲ್ಲಾಧಿಕಾರಿಗಳ ನೇತೃತ್ವದ ಕಮಿಟಿಯಲ್ಲಿ ಸಿಲುಕಿರುವುದರಿಂದ, ಮೊಟ್ಟ ಮೊದಲು ಆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸನ್ಮಾನ್ಯ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಮಾನ್ಯ ಸಚಿವರೇ, ಉತ್ತರ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ task force committee ವಿಚಾರವನ್ನು ಬಹಳಷ್ಟು ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ನಂತರ ಉತ್ತರ ಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು:– ಎಲ್ಲರೂ ಮತ್ತೊಂದು ಸಾರಿ ಭಾಷಣ ಮಾಡಿದರೆ ಹೇಗೆ? ಇದು ಸಾಧ್ಯವೇ?

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕೆಲವು ಸ್ಪಷ್ಟೀಕರಣ ಕೇಳಬೇಕಾಗಿದೆ.

ಅಧ್ಯಕ್ಷರು:– ಆಯಿತು, ಕೇಳಿ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವಿಚಾರದ ಬಗ್ಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸನ್ಮಾನ್ಯ ಅಧ್ಯಕ್ಷರು ನಿಯಮ 69ರ ಅಡಿಯಲ್ಲಿ ಪರಿವರ್ತಿಸಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರು. ಇಡೀ ಸದನದ ಸದಸ್ಯರು ಆ ಚರ್ಚೆಯಲ್ಲಿ ಭಾಗವಹಿಸಿದ್ದರು. ಮಾನ್ಯ ಕಂದಾಯ ಸಚಿವರು ಕಂದಾಯ ಇಲಾಖೆಯ ಮೂಲಕ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು 700 ಗ್ರಾಮಗಳ ಪಟ್ಟಿಯನ್ನು ಮಾಡಿದ್ದಾರೆ. ಈ ವಿಚಾರದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಂದ ನಾನೇ ಮಾಹಿತಿ ತರಿಸಿಕೊಂಡು ಒಟ್ಟು 3979 ಕುಡಿಯುವ ನೀರಿನ ಸಮಸ್ಯೆಯಿಂದ ಕೂಡಿರುವ ಗ್ರಾಮಗಳ ಸಂಖ್ಯೆ ಎಂದು ಹೇಳಿದ್ದೆ, ಜಿಲ್ಲಾಧಿಕಾರಿಗಳಿಂದ ಮಾಹಿತಿ

ತರಿಸಿಕೊಂಡಂಥ ಅಂಕಿ–ಅಂಶಗಳನ್ನು ಸದನದ ಮುಂದೆ ಹೇಳಿದ್ದೇನೆ. ಆದರೆ, ನೀವು 700 ಗ್ರಾಮಗಳು ಮಾತ್ರ ಕುಡಿಯುವ ನೀರಿನ ಸಮಸ್ಯೆ ಇಂದ ಕೂಡಿವೆ ಎಂದು ಹೇಳುತ್ತಿದ್ದೀರಿ. ಸರ್ಕಾರದಿಂದ ಪಡೆದ ಮಾಹಿತಿಯನ್ನು ನಾನು ಹೇಳಿದ್ದೇನೆ ಹಾಗೆಯೇ ಇವತ್ತು ನೀಡಿರುವುದು ಸಹ ಸರ್ಕಾರದ ಮಾಹಿತಿ ಆಗಿವೆ. ಆದ್ದರಿಂದ ಈ ಮಾಹಿತಿಗಳಲ್ಲಿ ಯಾವುದು ತಪ್ಪು, ಸರಿ ಎಂಬುದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಇವತ್ತಿನ ದಿವಸ task force committee ಇದ್ದೇ ಇರುತ್ತದೆ. ಆದರೆ, ಅದು ಚಾಲನೆಗೆ ಬಂದಿರುವುದಿಲ್ಲ. ಆದ್ದರಿಂದ ತಕ್ಷಣವೇ ಆಯಾಯ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ task force committee ಎಲ್ಲಾ ಕಡೆ ಅಸ್ತಿತ್ವಕ್ಕೆ ಬಂದು, ಅದು ಕಾರ್ಯಗತವಾಗುವಂಥ ಕೆಲಸ ಆಗಬೇಕು, ಹಾಗೆಯೇ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿರುವ task force committee ಗೆ ಕನಿಷ್ಠ ಒಂದು ಕೋಟಿ ರೂಪಾಯಿ ಕೊಡುವುದರ ಮೂಲಕ ಅದಕ್ಕೆ ಚಾಲನೆ ನೀಡಬೇಕು. ಅದು ಗೋಶಾಲೆ ಇರಬಹುದು ಅಥವಾ ಟ್ಯಾಂಕರ್ ಮೂಲಕ ನೀರನ್ನು ಕೊಡುವಂಥದು ಇರಬಹುದು, ಬೋರ್‌ವೆಲ್ ಕೊರೆಸುವುದು ಇರಬಹುದು. ಈ ರೀತಿ ಕೊಡತಕ್ಕಂಥದ್ದು ತಕ್ಷಣ ಆಗಬೇಕು. ಮತ್ತೊಂದು ವಿಚಾರವನ್ನು ನಾನು ಅವತ್ತು ಪ್ರಸ್ತಾಪ ಮಾಡಿದ್ದೆ. ಆ ವಿಚಾರ ಏನೆಂದರೆ, ಇಡೀ ರಾಜ್ಯದಲ್ಲಿ ಅಂತರ್ಜಲ ಕುಸಿಯುತ್ತಿದೆ ಎಂದು ಹೇಳಿದ್ದೆ. ಅಂತರ್ಜಲದ ಮಟ್ಟ ಸಂಪೂರ್ಣವಾಗಿ ಕುಸಿದು ಹೋಗುತ್ತಿದೆ ಎಂದು ಕೇಂದ್ರ ಸರ್ಕಾರದ ಒಂದು ಸಂಸ್ಥೆ ವರದಿ ಕೊಟ್ಟಿದೆ. ಅಂತರ್ಜಲದ ಮಟ್ಟ ಕುಸಿಯುತ್ತಿರುವ ಬಗ್ಗೆ ತಮ್ಮ ಉತ್ತರದಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ. ಆದ್ದರಿಂದ, ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಏನೊಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಅದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸಹ ಇದರ ಬಗ್ಗೆ ಉತ್ತರ ಕೊಡಬೇಕಾಗಿದೆ. ಏಕೆಂದರೆ, ನಾವು ಹಲವಾರು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಅಂದರೆ, R O plants ಎಷ್ಟಾಗಿವೆ ಎಂದು ಮತ್ತು ಅವುಗಳಲ್ಲಿ

ಎಷ್ಟು successful ಆಗಿ ನಡೆಯುತ್ತಿವೆ ಎಂಬ ಬಗ್ಗೆ ಉತ್ತರ ಕೊಡಬೇಕಾಗಿದೆ ಹಾಗೆಯೇ Multi Village Schemes ಎಷ್ಟು ಚಾಲನೆ ಕೊಡಲಾಗಿದೆ, ಇವುಗಳಲ್ಲಿ ಎಷ್ಟು Successful ಆಗಿ ನಡೆಯುತ್ತಿವೆ ಎಂದು ಮತ್ತು ಈಗ ಮತ್ತೆ ಎಷ್ಟು ಮಾಡಲಾಗುತ್ತಿದೆ ಎಂಬ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ, ಹಿಂದೆ ಪ್ರಾರಂಭ ಮಾಡಿರತಕ್ಕಂಥ multi village schemes ಸರಿಯಾದ ನಿರ್ವಹಣೆ ಇಲ್ಲದೆ failure ಆಗಿರುವ ಬಗ್ಗೆ ಕೂಡ ಸಾಕಷ್ಟು ಉದಾಹರಣೆಗಳಿವೆ. ಆದ್ದರಿಂದ, ಇಂಥವುಗಳ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂದು ಹೇಳಬೇಕು. ಇವತ್ತಿನ ದಿವಸ surface water source ಮೂಲಕ ಶಾಶ್ವತ ಕುಡಿಯುವ ನೀರಿಗೆ ನಾವು ಏನಾದರೊಂದು ಪರಿಹಾರ ಹುಡುಕುವುದಕ್ಕೆ ಸಾಧ್ಯವಿದೆ. ಆದ್ದರಿಂದ, ಗ್ರಾಮೀಣಾಭಿವೃದ್ಧಿ ಇಲಾಖೆ ಮುಖಾಂತರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಹೇಳಬೇಕಾಗಿದೆ. ಈ ಬಗ್ಗೆ ನಾನು ಸಾಕಷ್ಟು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ಆದ್ದರಿಂದ, ಆ ಎಲ್ಲಾ ವಿಷಯ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವತ್ತು ಬಹಳ ಪ್ರಮುಖವಾಗಿ ಶಾಶ್ವತ ಕುಡಿಯುವ ನೀರಿನ ಯೋಜನೆಯಾದ ಎತ್ತಿನಹೊಳೆ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಈ ವಿಷಯದ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರು ಅಥವಾ ಕಂದಾಯ ಸಚಿವರು ಅಥವಾ ನೀರಾವರಿ ಮಂತ್ರಿಗಳಾಗಲಿ ಉತ್ತರ ಕೊಡಬೇಕು. ಏಕೆಂದರೆ, ಅವತ್ತಿನ ದಿವಸ ಸುಮ್ಮನೆ confusion ಆಗಿ, ಮಾನ್ಯ ಶಾಸಕರು ಭಾವೋದ್ವೇಗಕ್ಕೆ ಒಳಗಾಗಿ ಅದರ ಬಗ್ಗೆ ಎಷ್ಟು ಚರ್ಚೆ ಆಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಆದ್ದರಿಂದ, ಕುಡಿಯುವ ನೀರಿನ ಬಗ್ಗೆ ತಾತ್ಕಾಲಿಕವಾಗಿ ಏನು ವ್ಯವಸ್ಥೆ ಮಾಡಲಾಗಿದೆ ಎಂಬ ಬಗ್ಗೆ ಮಾನ್ಯ ಕಂದಾಯ ಸಚಿವರು ಹೇಳಬೇಕು. ಆದರೆ, ಶಾಶ್ವತವಾದ ಕುಡಿಯುವ ನೀರಿನ ಯೋಜನೆಯಾದ ಎತ್ತಿನಹೊಳೆ ಯೋಜನೆ ಬಗ್ಗೆ ಸರ್ಕಾರ ಯಾವುದೇ ರೀತಿಯ ಒಂದು ಆಲೋಚನೆ ಮಾಡುತ್ತಿಲ್ಲವೆಂದು ಹಾಗೂ ಬಜೆಟ್‌ನಲ್ಲಿ ಈ ಬಗ್ಗೆ mention ಮಾಡಿಲ್ಲವೆಂದು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು

ಗ್ರಾಮಾಂತರ ಜಿಲ್ಲೆಗಳ ಜನರಲ್ಲಿ ಗೊಂದಲ ಇದೆ. ಆದ್ದರಿಂದ, ಈ ಗೊಂದಲವನ್ನು ನಿವಾರಣೆ ಮಾಡಬೇಕಾದರೆ ಅದರ status ಏನಿದೆ ಎಂಬ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ಉತ್ತರ ಕೊಡತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ, ಇದಕ್ಕೆಲ್ಲಾ ಸ್ಪಷ್ಟೀಕರಣವನ್ನು ನೀವು ಕೊಟ್ಟಾಗ ಮಾತ್ರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಿರುವಂಥದಕ್ಕೆ ಸ್ಪಷ್ಟತೆ ಬರುವುದಕ್ಕೆ ಸಾಧ್ಯವಿದೆ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಸಚಿವರು ಈ ಎಲ್ಲ ವಿಷಯಕ್ಕೆ ಸಂಬಂಧಪಟ್ಟಂತೆ ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳಲ್ಲಿ ಬಹಳ ಮುಖ್ಯವಾದ ವಿಷಯ. ಎಲ್ಲಾ ವಿಷಯವನ್ನು ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಜಗದೀಶ ಶೆಟ್ಟರ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇಂಜಿನಿಯರ್ಸ್ ಎಲ್ಲಾ ಕೊಟ್ಟು ಇದಕ್ಕೊಂದು ಪ್ರತ್ಯೇಕ ಇಲಾಖೆಯನ್ನು, ಮಾಡಿದಿರಿ. ಅದು 6 ತಿಂಗಳಿನಿಂದ ಅಸ್ತಿತ್ವಕ್ಕೆ ಬಂದಿಲ್ಲ.

ಅಧ್ಯಕ್ಷರು:- ಅಲ್ಲಿ ಇಂಜಿನಿಯರ್ ಇಲ್ಲ, ಕೆಲಸ ಇಲ್ಲ.

ಶ್ರೀ ಜಗದೀಶ ಶೆಟ್ಟರ:- ಅವರಿಗೆ ವೇತನವನ್ನು ಕೊಡುತ್ತಿಲ್ಲವೆನ್ನುವುದು ಇದೆ. ಆವತ್ತು ನಾನು ಪ್ರಸ್ತಾಪ ಮಾಡಿದೆ. ಅವರಿಗೆ ವೇತನ ಕೊಡುತ್ತಿಲ್ಲ. ಅದು ಏನಾಗಿದೆ ಎನ್ನುವುದು ಗೊತ್ತಾಗುತ್ತಿಲ್ಲ, ಅವರು ಕೆಲಸ ಮಾಡಬೇಕೋ ಬೇಡವೋ ಎಂದು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:- ನಮ್ಮ ಜಿಲ್ಲೆಗೆ ಒಬ್ಬರು ಇಂಜಿನಿಯರನ್ನು ಹಾಕಿದ್ದಾರೆ, ಅವರು ಇನ್ನು ಎರಡು ತಿಂಗಳಲ್ಲಿ ನಿವೃತ್ತಿಯಾಗುತ್ತಾರೆ.

ಅಧ್ಯಕ್ಷರು:- ನಾನು ಮೊನ್ನೆ ಅವರನ್ನು ಕೇಳಿದ್ದೇನೆ, ಅವರಿಗೆ ಏನು ಮಾಡುವಂತಿಲ್ಲ, ಏನು ಹೇಳುವಂತಿಲ್ಲ. ಇನ್ನೊಂದು ವಿಷಯವನ್ನು ತಾವು ಪ್ರಸ್ತಾಪ ಮಾಡಿದಿರಿ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಇದನ್ನು ಮ್ಯಾನೇಜ್ ಮಾಡುವುದಕ್ಕೆ ಒಂದು ಏಜೆನ್ಸಿ ಬೇಕು, ಅದಕ್ಕೆ ಜವಾಬ್ದಾರಿ ಕೊಡಬೇಕು. ಇಲ್ಲದಿದ್ದರೆ ಯಾವ ಗ್ರಾಮ ಪಂಚಾಯತಿಯವರು ನೋಡಬೇಕು? ಯಾರು ದುಡ್ಡು ಕೊಡಬೇಕು? ಎಂದು ಗೊಂದಲವಾಗುತ್ತದೆ.

ಶ್ರೀ ಜಗದೀಶ ಶೆಟ್ಟರ:- ಇದನ್ನು ನೋಡಿಕೊಳ್ಳುವುದಕ್ಕೆ ಒಂದು ಏಜೆನ್ಸಿ ಬೇಕು.

ಅಧ್ಯಕ್ಷರು:- ಅದು ಬೇಕಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, 1140 ಟ್ಯಾಂಕರ್‌ಗಳಲ್ಲಿ ನೀರು ತಂದು ಕೊಡುತ್ತೇವೆಂದು ಹೇಳಿದ್ದಾರೆ. ನೀರು ಎಲ್ಲಿಂದ ತಂದು ಕೊಡುತ್ತಾರೆ? ಶುದ್ಧವಾದ ನೀರು ಟ್ಯಾಂಕರ್ ಮೂಲಕ ತಂದು ಕೊಡುತ್ತಾರೆಂದು ಹೇಳುವುದಕ್ಕೆ ಯಾವುದಾದರೊಂದು ಸರ್ಟಿಫಿಕೇಟ್ ಬೇಕು. ಯಾವ್ಯಾವ ತಾಲ್ಲೂಕಿನಲ್ಲಿ ಶುದ್ಧ ನೀರನ್ನು ಕುಡಿಯತಕ್ಕಂಥ ಬೋರ್‌ವೆಲ್ ಹಾಕಿರುವುದನ್ನು ಗುರುತು ಮಾಡಿ, ಅವರಿಗೆ ಹಣ ಫಿಕ್ಸ್ ಮಾಡಿ, ಶುದ್ಧವಾದ ಕುಡಿಯುವ ನೀರನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಅವರಿಗೆ ಬಾಡಿಗೆ ಸಿಗುತ್ತದೆ, ಜನರಿಗೆ ಯಾವುದಾದರೊಂದು ಫ್ಲೋರೈಡ್ ಇರತಕ್ಕಂಥ ನೀರನ್ನು ಕೊಟ್ಟರೆ ಅದು ಇನ್ನೂ ಅನಾನುಕೂಲವಾಗುತ್ತದೆ. ದಯವಿಟ್ಟು ಸರ್ಟಿಫೈ ಮಾಡಿ, ಕುಡಿಯುವ ನೀರಿನ್ನು ಕೊಡುವಂಥದ್ದು ಮಾಡಬೇಕು. ಬೋರ್‌ವೆಲ್ ಬೇಕಾದಷ್ಟು ಎಲ್ಲಾ ಜಿಲ್ಲೆಯಲ್ಲಿ ಕೊರೆದಿದ್ದಾರೆ. ಇನ್ನೂ ಅವುಗಳಿಗೆ ಹ್ಯಾಂಡ್‌ಪಂಪ್ ಹಾಕಿಲ್ಲ. ನೂರಾರು ಬೋರ್‌ವೆಲ್‌ಗಳನ್ನು ಕೊರೆದು ಹ್ಯಾಂಡ್‌ಪಂಪ್ ಹಾಕಿಲ್ಲ, ಆ ಹ್ಯಾಂಡ್ ಪಂಪ್‌ಗಳನ್ನು ಹಾಕಿಸಬೇಕು. ಮಂಡ್ಯ ಜಿಲ್ಲೆಯ ಸಮಸ್ಯೆ ಬಗ್ಗೆ ಮಾನ್ಯ ಚಲುವರಾಯಸ್ವಾಮಿಯವರು ಹೇಳಿರುತ್ತಾರೆ. ಅದನ್ನು ಗಂಭೀರವಾಗಿ ಯೋಚನೆ ಮಾಡಬೇಕು. ಎಲ್ಲಾ ಜಿಲ್ಲಾಧಿಕಾರಿಗಳು ಎಲ್ಲಾ ಶಾಸಕರುಗಳನ್ನು

ಕರೆದು ಮೀಟಿಂಗ್ ಮಾಡಿ, ಚರ್ಚೆ ಮಾಡಿ, ಸರ್ಕಾರಕ್ಕೆ ವರದಿ ತರಿಸಿಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಅಧ್ಯಕ್ಷರೆ, ನಾನು ಬಹಳ ಸಂಕ್ಷಿಪ್ತವಾಗಿ ಆವತ್ತು ಹೇಳಿದಂತೆ ಹೇಳುತ್ತೇನೆ. ಈಗಾಗಲೇ ನಮ್ಮ ನಾಯಕರು ಪ್ರಸ್ತಾಪಿಸಿದರು. ಗ್ರಾಮೀಣ ನೀರು ಸರಬರಾಜು ವಿಭಾಗ ಇದೆ. ನಮ್ಮ ಈ ನೀರಿನ ಅಭಾವ ಉಂಟಾಗುವುದಕ್ಕೆ ಮತ್ತು ಸಮಸ್ಯೆಗೆ ಸ್ಪಂದಿಸದೆ ಇರುವುದಕ್ಕೆ ಒಂದು ಮುಖ್ಯವಾದ ಕಾರಣ ಇದೆ. ಜಿಲ್ಲಾ ಪಂಚಾಯತಿಯಲ್ಲಿ ಹಿಂದೆ ಏನಿತ್ತು, ಅವರು ಅದನ್ನು ನೋಡಿಕೊಂಡು maintain ಮಾಡಿಕೊಂಡು ಹೋಗುತ್ತಿದ್ದರು. ಈಗ ಪ್ರತ್ಯೇಕವಾಗಿ ಗ್ರಾಮೀಣಾಭಿವೃದ್ಧಿ ಸಚಿವರು ವಿಭಾಗ ಮಾಡಿದ ಮೇಲೆ ಯಾರೂ ಅಲ್ಲಿ ಸ್ಥಳೀಯ ಮಟ್ಟದಲ್ಲಿ ಹೇಳುವವರು ಇಲ್ಲ, ಕೇಳುವವರು ಇಲ್ಲ. ಗ್ರಾಮೀಣ ನೀರು ಸರಬರಾಜು ವಿಭಾಗ ಎಂದರೆ ಒಂದು ಗೊಂದಲದ ಗೂಡಾಗಿದೆ. ಆ ಹಳೆಯ ಜಿಲ್ಲಾ ಪಂಚಾಯತಿಯವರನ್ನು ಕೇಳಿದರೆ ನಾವು ಎಲ್ಲಾ handover ಮಾಡಿದ್ದೇವೆಂದು ಹೇಳುತ್ತಾರೆ. ಅಲ್ಲಿ hand over ಆಗಿರುವವರ ಹತ್ತಿರ ಒಬ್ಬ ಪ್ಯೂನ್ ಇಲ್ಲ, ಒಬ್ಬ ಕ್ಲರ್ಕ್ ಇಲ್ಲ, ಯಾರೂ ಇಲ್ಲ. ಅವರಿಗೆ ಪಗಾರ ಇಲ್ಲ, ಇದಕ್ಕೆ ದುಡ್ಡೂ ಇಲ್ಲ. ನೀವು ಏಕಾಏಕಿ ಕುಡಿಯುವ ನೀರಿನ ಸರಬರಾಜು ವಿಭಾಗವನ್ನು ಪ್ರತ್ಯೇಕ ಮಾಡಿರುವುದರಿಂದ ಸಮಸ್ಯೆಗಳು ಇನ್ನಷ್ಟು ಉಲ್ಬಣಕ್ಕೆ ಕಾರಣವಾಗಿದೆ. 5–10 ವರ್ಷವಾದ ಮೇಲೆ ಅದೆಲ್ಲಾ ವ್ಯವಸ್ಥೆ ಹೋಗುತ್ತದೆಂದು ಮಾನ್ಯ ಹೆಚ್.ಕೆ. ಪಾಟೀಲರು ವಾದ ಮಾಡಿಯೇ ಮಾಡುತ್ತಾರೆ, ಅದು ನನಗೆ ಗೊತ್ತಿದೆ. ಏಕೆಂದರೆ, ಅವರ policy matters ಬಗ್ಗೆ, ದೂರಗಾಮಿ ವಿಚಾರದ ಬಗ್ಗೆ ಯಾವಾಗಲೂ ಹೀಗೆಲ್ಲಾ ಹೇಳುತ್ತಿರುತ್ತಾರೆ. ಆದರೆ ತಕ್ಷಣದಲ್ಲಿ Full staff ಅಲ್ಲಿ ಕೊಡಲಿಲ್ಲ. ಅಲ್ಲಿ ಇಂಜಿನಿಯರ್ ಅನ್ನು ಬಿಟ್ಟು ಬೇರೆ ಯಾರನ್ನೂ ಕೊಡಲಿಲ್ಲ. ಆ ಇಂಜಿನಿಯರ್‌ಗೂ ಹೇಳುವವರು ಕೇಳುವವರು ಯಾರು ಇಲ್ಲ, ಆ ಸ್ಥಿತಿ ಇದೆ. ಅದಕ್ಕೆ ಸಮರ್ಪಕವಾಗಿ ಈ ವಿಭಾಗಕ್ಕೆ ಶಕ್ತಿ ಕೊಡುವಂಥ ಕೆಲಸ ಆಗಬೇಕು. ಎರಡನೆಯದಾಗಿ, ಕೆ.ಇ.ಬಿ.ಯವರು ಕನೆಕ್ಷನ್ ಕೊಡುವುದಿಲ್ಲ. ನಾನು ಮೊನ್ನೆ ಮಾತನಾಡುವಾಗ ಹೇಳಿದೆ. ನಮ್ಮದು ಎಲ್ಲಾ ರೆಡಿ ಇದೆ, ಬಾವಿ ಇದೆ,

ಪೈಪ್‌ಲೈನ್ ರೆಡಿ ಇದೆ, ಟ್ಯಾಂಕ್ ರೆಡಿ ಆಗಿದೆ, ಕೆ.ಇ.ಬಿ.ಯವರು ಕನೆಕ್ಷನ್ ಕೊಡುತ್ತಿಲ್ಲ.

ಅಧ್ಯಕ್ಷರು:- materials ಇಲ್ಲವೆಂದು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರದು self execution, ಆ self execution ಬಗ್ಗೆ ಕೇಳಿದರೆ ಅದೊಂದು ದೊಡ್ಡ ಸಮಸ್ಯೆ. ನಾವು ಕೆ.ಇ.ಬಿ.ಯವರಿಗೆ ಏನು ಹೇಳಿದೆವು, Paper ಎಲ್ಲಾ process ನಲ್ಲಿದೆ, ಆ ಇಲಾಖೆ, ಈ ಇಲಾಖೆ, ಆ ಅಧಿಕಾರಿ, ಈ ಅಧಿಕಾರಿ ಎಂದು ಓಡಾಡುತ್ತಿದೆ. ಅವರಿಗೆ ತಕ್ಷಣದಲ್ಲಿ ತಾತ್ಕಾಲಿಕವಾಗಿ ಒಂದು ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಕೆ.ಇ.ಬಿ. ಅಧಿಕಾರಿಗಳಿಗೆ ಒಂದು ಸೂಚನೆ ಕೊಡಿ. Ongoing water supply scheme ಯಾವುದು ಇದೆಯೋ, ಈಗ ರೆಡಿಯಾಗಿದೆಯೋ ಅದಕ್ಕೆಲ್ಲಾ ಕಾಗದ ಪತ್ರಗಳನ್ನು ರೆಡಿ ಮಾಡಿ ಕೊಡುತ್ತಾರೆ. ಸರ್ಕಾರದಿಂದ ಸರ್ಕಾರಕ್ಕೆ ದಾಖಲೆ ಕೊಡುವುದಾಗಿದೆ. ಕೆ.ಇ.ಬಿ.ಯವರಿಗೆ ಕನೆಕ್ಷನ್ ಕೊಡುವುದಕ್ಕೆ ಏಕೆ ಸೂಚನೆಯನ್ನು ಕೊಡುತ್ತಿಲ್ಲ? ಆ ಸೂಚನೆ ಕೊಡಿಸಬೇಕು. ಕೆ.ಇ.ಬಿಯವರು ತಕ್ಷಣ ಯಾವ ಪೇಪರ್ ಪ್ರೋಸೆಸ್‌ನಲ್ಲಿದೆಯೋ, ತಾತ್ಕಾಲಿಕವಾಗಿ, ಅವರಿಗೆಲ್ಲಾ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಹೇಳಬೇಕು. ಇವೆರಡು ಆಗದಿದ್ದರೆ ಸಮಸ್ಯೆ ಬಗೆಹರಿಯುವುದಿಲ್ಲ. ಮೂರನೆಯದಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಏನು ಕಮಿಟಿ ಮಾಡಬೇಕೆಂದು ಈಗ ಆಗಿದೆಯೋ, ಅದಕ್ಕೆ ಕನಿಷ್ಠ ಒಂದು ಕೋಟಿ ರೂ.ಗಳ ಹಣವನ್ನು ಕೊಡಬೇಕು. ಇಲ್ಲದಿದ್ದರೆ ಅಲ್ಲಿ ನಾವು ಉತ್ತರ ಹೇಳುವುದಕ್ಕಾಗುವುದಿಲ್ಲ. ಇವರ ಉತ್ತರ ನೋಡಿದರೆ 7 ಜಿಲ್ಲೆಗಳ್ಲಿ ಮಾತ್ರ ಟ್ಯಾಂಕರ್ ಮೂಲಕ ನೀರು ಕೊಡುತ್ತಿದ್ದೇವೆ ಎನ್ನತಕ್ಕಂಥ ಸಂದರ್ಭ ಇದೆ. ನಿಮ್ಮ ಜಿಲ್ಲಾಧಿಕಾರಿಗಳು ಅಥವಾ ನಿಮ್ಮ ತಹಶೀಲ್ದಾರ್‌ಗಳು ಇದರೊಳಗೆ ಉದಾರತೆಯನ್ನು ತೋರಿಸಿ, ನಿಜವಾಗಿ ಕೊಡದೆ ಹೋದರೆ ಕಷ್ಟವಾಗುತ್ತದೆ. ಜನರಿಗೆ ಅಲ್ಲಿ ಹಾಹಾಕಾರ ಇದೆ, ತೊಂದರೆ ಇದೆ. ಕರೆಂಟ್ 3 ಫೇಸ್ ಯಾವಾಗ ಇರುತ್ತದೆ, ಯಾವಾಗ ಇರುವುದಿಲ್ಲ ಎನ್ನುವುದು ಗೊತ್ತಿಲ್ಲ. ಕರೆಂಟ್ ಇದ್ದಾಗ ಚಾಲೂ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ, ಕರೆಂಟ್ ಯಾವಾಗ

ಇರುತ್ತದೆ, ಯಾವಾಗ ಇರುವುದಿಲ್ಲವೆನ್ನುವುದು ಗೊತ್ತಿಲ್ಲದೆ ಇರುವುದರಿಂದ, ಆ ಸಮಸ್ಯೆಗಳು ಬೇರೆ ಬೇರೆ ಇದೆ. ಆದರೆ ನೀವು ತಕ್ಷಣ ಒಂದು ಕೋಟಿ ರೂ.ಗಳನ್ನು ಶಾಸಕರ ಅಧ್ಯಕ್ಷತೆಯಲ್ಲಿರುವಂಥ ಸಮಿತಿಗೆ ಬಿಡುಗಡೆ ಮಾಡಿ, ತಕ್ಷಣ ಪರಿಹಾರದ ಕೆಲಸಗಳನ್ನು ಮಾಡುವುದಕ್ಕೆ ಹೇಳಬೇಕು. ಟ್ಯಾಂಕರ್ ಮೂಲಕ ನೀರನ್ನು ಕೊಡುವುದಕ್ಕೆ ಸ್ವಲ್ಪ ಉದಾರವಾಗಿ ಹಣ ಕೊಡುವುದಕ್ಕೆ ಹೇಳಬೇಕು. ಅವರು ಹೇಗೆ ಲೆಕ್ಕ ಮಾಡುತ್ತಾರೆಂದರೆ, ಒಬ್ಬ ವ್ಯಕ್ತಿಗೆ 30–50 ಲೀಟರ್‌ನಂತೆ ಇವರ ಅಧಿಕಾರಿಗಳು ಲೆಕ್ಕ ಮಾಡುತ್ತಾರೆ. UNO, World Bank ಹೇಳಿದೆ ಎಂದು ಇವರು ಅದೇ ಲೆಕ್ಕವನ್ನು ಹೇಳುತ್ತಾರ. ಇವರು ಹೇಳುವುದು ಹಾಗೆ.

ಅಧ್ಯಕ್ಷರು:– ಯಾರು ಆ ತರಹ ಹೇಳುತ್ತಾರೆ? ಸರ್ಕಾರ 75 ಲೀಟರ್ ಕೊಡುತ್ತೇವೆಂದು ಹೇಳಿದ್ದಾರೆ. ಸದ್ಯ ಒಂದು ಬಕೆಟ್ ನೀರು ಕೊಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರು ಹೇಳಲಿ, ಇವರು ಕೊಡುವುದಿಲ್ಲ. ಅದಕ್ಕಾಗಿ ನಾನು ನನ್ನ ನೋವಿನಿಂದ ಹೇಳುತ್ತಿದ್ದೇನೆ. ವಸ್ತುಸ್ಥಿತಿ ನೋಡಿದ್ದೇನೆ. ಅಲ್ಲಿ 50 ಲೀಟರ್ ನೀರು ಬರುತ್ತದೆ ಹಾಗಾಗಿ ಇವರಿಗೆ ಟ್ಯಾಂಕರ್ ಮೂಲಕ ನೀರು ಕೊಡುವುದು ಬೇಡವೆಂದು ಅಧಿಕಾರಿಗಳು ಹೇಳುತ್ತಾರೆ. ನಮ್ಮ ನಿಮ್ಮ ಸದಿಚ್ಛೆ ಏನಿದೆಯೋ ಅದು ತಹಶೀಲ್ದಾರ್‌ವರೆಗಿನ ಅಧಿಕಾರಿ ವರ್ಗಕ್ಕೆ ಹೋಗಬೇಕು. ಇಲ್ಲದಿದ್ದರೆ ಈ ಸದಿಚ್ಛೆ ಈ ಸದನದಲ್ಲಿಯೇ ಉಳಿದುಕೊಳ್ಳುತ್ತದೆ. ಅಲ್ಲಿಗೆ ಹೋಗುವುದೇ ಇಲ್ಲ. ಹಾಗಾಗಿ ಸದಿಚ್ಛೆಯನ್ನು ಕಳುಹಿಸುವಂಥ ಇಚ್ಛಾಶಕ್ತಿಯನ್ನು ತಾವು ತೋರಿಸಬೇಕು. ಆರ್.ಡಿ.ಪಿ.ಆರ್. ದವರು ವಿಶೇಷವಾಗಿ ತೋರಿಸಬೇಕು. ನಿಮ್ಮನ್ನು ತೋರಿಸಿಕೊಂಡು ಆರ್.ಡಿ.ಪಿ.ಆರ್.ದವರು ಕೈಮುಗಿದುಕೊಂಡು ಕುಳಿತು ಬಿಟ್ಟಿದ್ದಾರ, ನಮಗೆ ಗೊತ್ತಿದೆ. ಹಾಗಾಗಿ ನೀವು ದಯವಿಟ್ಟು ಆರ್.ಡಿ.ಪಿ.ಆರ್.ದ ಅಧಿಕಾರಿಗಳಿಗೂ ನಿಮ್ಮ ಇಲಾಖೆಯ ಅಧಿಕಾರಿಗಳ ಮೂಲಕ ಸಂದೇಶ ತಿಳಿಸಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):- ಮಾನ್ಯ ಅಧ್ಯಕ್ಷರೆ, ಮಲೆನಾಡು ಭಾಗದಲ್ಲಿ ಮೇಲ್ನೋಟಕ್ಕೆ ಕುಡಿಯುವ ನೀರಿಗೆ ಹಾಹಾಕಾರ ಇಲ್ಲವೆಂದು ಅನಿಸುತ್ತದೆ. ನಮ್ಮಲ್ಲಿರತಕ್ಕಂಥ 584 ಹಳ್ಳಿಗಳಲ್ಲಿ ಸುಮಾರು 150 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಹಾಹಾಕಾರವಿದೆ. ಕಟ್ಟಾಯಹೋಬಳಿ ಎಂದು ಬಯಲು ಪ್ರದೇಶದಲ್ಲಿ ಹಾಸನ ತಾಲ್ಲೂಕಿನಲ್ಲಿ ಹೋಬಳಿಯೊಂದು ಬರುತ್ತದೆ. ಅಲ್ಲಿ ಇರತಕ್ಕಂಥ 84 ಹಳ್ಳಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಆಗಿದೆ. ದಯಮಾಡಿ ಮಾನ್ಯ ಕಾಗೇರಿಯವರು ಹೇಳಿದಂತೆ ಕನಿಷ್ಠ ಒಂದು ಕೋಟಿ ರೂ.ಗಳಷ್ಟು ಹಣವನ್ನು ಒಂದು ಕ್ಷೇತ್ರಕ್ಕೆ ಕೊಡಬೇಕು. ಕುಡಿಯುವ ನೀರಿನ ವಿಭಾಗ ಬಗ್ಗೆ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ತುಂಬಾ ಚೆನ್ನಾಗಿ ಸತ್ಯವಾದ ವರದಿ ಬಂದಿದೆ. ದಯಮಾಡಿ ಅವರಿಗೆ ಸಂಬಳ ಕೊಡಿ, ಕೆಲಸ ಮಾಡಿಸಿ ನಮ್ಮದೇನು ತಕರಾರು ಇಲ್ಲ. ಇಲ್ಲದಿದ್ದರೆ ಮೊದಲಿನಂತೆ ಅದನ್ನು ಮುಚ್ಚಿ ಉಪ ವಿಭಾಗಕ್ಕೆ ಕೊಡಿ.

ಅಧ್ಯಕ್ಷರು:- ನೀವು ಉತ್ತರವನ್ನು ಹೇಳುತ್ತೀರಾ ಅಥವಾ ಕಂದಾಯ ಮಂತ್ರಿಗಳು ಹೇಳುತ್ತಾರೋ?

ಶ್ರೀ ಹೆಚ್.ಕೆ. ಪಾಟೀಲ್:-ಅವರು ಉತ್ತರವನ್ನು ಮುಗಿಸಲಿ.

ಅಧ್ಯಕ್ಷರು:- ಮಾನ್ಯ ಹೆಚ್.ಕೆ. ಪಾಟೀಲ್‌ರೆ, administrative ಆಗಿ ಕಂದಾಯ ಸಚಿವರು ಉತ್ತರ ಹೇಳಲಿ. ಬರಗಾಲ ಪರಿಸ್ಥಿತಿಗೆ ಕೆಲವರು ಮಾತನಾಡಿದ್ದಾರೆ, ಕೆಲವರು ಮಾತನಾಡಿಲ್ಲ. ಒಟ್ಟಾರೆ ರಾಜ್ಯದಲ್ಲಿ ಬರಗಾಲ ಇರುವ ಪರಿಸ್ಥಿತಿಯ ಬಗ್ಗೆ ನೀವು ಗಂಭೀರವಾಗಿ ಹೇಳಿಕೆಯ ಜೊತೆಗೆ ಎಲ್ಲೆಲ್ಲಿ ಬರಗಾಲ ತಲೆದೋರಿದೆ ಅದನ್ನು ಪರಿಹಾರ ಮಾಡುವುದಕ್ಕೆ ಏನು ಕಾರ್ಯಕ್ರಮ ರೂಪಿಸುತ್ತೀರಿ ಅದನ್ನು ಹೇಳಿ ಬಿಡಿ. ಈಗ ಎಲ್ಲಾ ಸದಸ್ಯರುಗಳು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ನಿಮಿಷ ಹೇಳುತ್ತೇನೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ 5 ಹೋಬಳಿಗಳಲ್ಲಿ 4 ಹೋಬಳಿ ನೀರಾವರಿ ಇಲ್ಲದೆ ಇರುವ ಪ್ರದೇಶವಾಗಿದೆ. ನಮ್ಮನ್ನು ಬರಗಾಲ ಪ್ರದೇಶದಲ್ಲಿ ಸೇರಿಸಿಲ್ಲ. ಬರಗಾಲ ಇದೆ ಎಂದು ಅರಸೀಕೆರೆಗೆ 1 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು:- ನೀವು ಮತ್ತು ಮುಖ್ಯಮಂತ್ರಿಗಳು ಆತ್ಮೀಯ ಮಿತ್ರರು, ನಿಮ್ಮದು ಹೇಗೆ ಬಿಟ್ಟು ಹೋಗಿದೆ?

ಶ್ರೀ ಹೆಚ್.ಡಿ. ರೇವಣ್ಣ:- ಸಾವಿರ ಅಡಿ ಕೊರೆದರೂ ನೀರು ಸಿಗದ ಪರಿಸ್ಥಿತಿ ಇದೆ. ನಾನು ಹೆಚ್.ಕೆ. ಪಾಟೀಲ್‌ರವರ ಹತ್ತಿರ 4-6 ಸಲ ಹೇಳಿದ್ದೇನೆ. ಇವತ್ತು ಕುಡಿಯುವ ನೀರಿಗೆ ತೊಂದರೆ ಇದೆ. ಇವತ್ತು ಕನಿಷ್ಠ 2 ಕೋಟಿ ರೂ.ಗಳನ್ನು ಕೊಡಬೇಕು, ಬೇಕಾದರೆ ರಾಯರೆಡ್ಡಿಯವರೆ, ಬಂದು ನೋಡಲಿ. ಸಮಸ್ಯೆ ಇದ್ದರೆ ಮಾಡಿ ಕೊಡಲಿ, ಇಲ್ಲದಿದ್ದರೆ ಬೇಡ ಸರ್. 4 ಹೋಬಳಿಗಳಲ್ಲಿ ಕುಡಿಯುವ ನೀರು ಇಲ್ಲ. ದಯಮಾಡಿ ಅದನ್ನು ಬರಗಾಲ ಪ್ರದೇಶಕ್ಕೆ ಸೇರಿಸಿ, ಎರಡು ಕೋಟಿ ರೂ.ಗಳನ್ನು ಕೊಡಿಸಿ ಕೊಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಉಪ್ಪಿನವನು ಅಳುತ್ತಾನೆಂದು ನೀವು ತೆಂಗಿನವರು ಅತ್ತರೆ ಹೇಗೆ? ಒಂದು ಕಡೆ ಮಾನ್ಯ ರೇವಣ್ಣನವರು ಹೇಳುವುದು ನೋಡಿದರೆ, ಉಪ್ಪಿನವನು ಅಳುತ್ತಿದ್ದನು ಎಂದು ತೆಂಗಿನ ಕಾಯಿಯವನು ಅಳುತ್ತಿದ್ದನಂತೆ, ಹಾಗೆ ಆಗಿದೆ.

ಶ್ರೀ ವೈ.ಎಸ್.ವಿ. ದತ್ತ (ಕಡೂರು):- ಮಾನ್ಯ ಅಧ್ಯಕ್ಷರೆ, ಉತ್ತರ ಹೇಳುವುದು ಸರಿ, ನಾವು ನೋಡಿದ್ದೇವೆ. ಆವತ್ತು ನಾವು ಚರ್ಚೆ ಮಾಡಿದಾಗ, ತಾತ್ಕಾಲಿಕವಾದ ಪರಿಹಾರ ಮತ್ತು ಶಾಶ್ವತವಾದ ಪರಿಹಾರಗಳ ಬಗ್ಗೆ ಹೇಳಿದೆವು. ಪರಿಹಾರ ಹೇಳಿ ಎಂದು ನೀವೇ ನಮ್ಮ ಬಾಯಿ ಬಿಡಿಸಿದಿರಿ. ನಾವು ತಾತ್ಕಾಲಿಕವಾದ ಕೆಲವು ಪರಿಹಾರವನ್ನು ಹೇಳಿದೆವು, ಶಾಶ್ವತ ಪರಿಹಾರದ ಬಗ್ಗೆಯೂ ಹೇಳಿದೆವು. ಆದರೆ ಈ ಉತ್ತರದಲ್ಲಿ ತಾತ್ಕಾಲಿಕವಾದ ಪರಿಹಾರದ ಬಗ್ಗೆಯೂ ಸ್ಪಷ್ಟತೆ ಇಲ್ಲ, ಶಾಶ್ವತವಾದ ಪರಿಹಾರದ ಬಗ್ಗೆ ಸೊಲ್ಲು

ಇಲ್ಲ. ಎರಡೂ ಕೂಡ ಇಲ್ಲ. ಈ ಉತ್ತರದಿಂದ ನಮಗೆ ಸಮಾಧಾನವಾಗುವುದು ಬೇಡ, ಸಮಸ್ಯೆಗೆ ಪರಿಹಾರವಾಗುತ್ತದೆ ಎನ್ನುವುದು ಕೂಡ ಇಲ್ಲ. ಎರಡನೆಯದು, ಇವರ ಉತ್ತರದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಮೊನ್ನೆ ದಿನ ನನ್ನ ಕ್ಷೇತ್ರದಲ್ಲಿ ಯುಗಾದಿ ಹಬ್ಬ, ಎಣ್ಣೆ ಸ್ನಾನಕ್ಕಾದರೂ ನೀರು ಕೊಡಿ ಎಂದು ಜನರು ಗಲಾಟೆ ಮಾಡುತ್ತಿದ್ದರು. ನಾವು ಟ್ಯಾಂಕರ್‌ಗಳು ಮೂಲಕ ನೀರು ಕೊಡಿಸೋಣ ಎಂದರೆ ಅಧಿಕಾರಿಗಳು ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ. ಟ್ಯಾಂಕರ್‌ಗಳಿಗೆ ಹಳೆ ಬಾಕಿ ಕೊಟ್ಟಿಲ್ಲ. ಆಡಳಿತ ಪಕ್ಷದವರೂ ನಮ್ಮ ಬೆಂಬಲಕ್ಕೆ ಬರಬೇಕು. ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂದು ಏನಿಲ್ಲ. ಇದು ಎಲ್ಲರ ಸಮಸ್ಯೆ. ಆದ್ದರಿಂದ ಇದರಲ್ಲಿ ದುಡ್ಡನ್ನು ಯಾರು ಕೊಡಬೇಕು?

ಅಧ್ಯಕ್ಷರು:- ದುಡ್ಡು ಸರ್ಕಾರ ಕೊಡಬೇಕು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಯಾರು ಕೊಡುವುದು? ಇದರೊಳಗೆ ಅಧಿಕಾರಿಗಳು ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ನೀರು ಸರಬರಾಜು ಮತ್ತು ನೈರ್ಮಲ್ಯ ಎಂದು ಜಿಲ್ಲಾ ಪಂಚಾಯಿತಿಯಲ್ಲಿ ಇದೆ. ಅದಕ್ಕೆ ಒಬ್ಬರು AEE ಯವರು ಇದ್ದಾರೆ. ಅವರನ್ನು ಕೇಳಿದರೆ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಇವರನ್ನು ಕೇಳಿದರೆ ನಮ್ಮದಲ್ಲ ಎಂದು ಹೇಳುತ್ತಾರೆ. ಕಂದಾಯ ಇಲಾಖೆಯವರನ್ನು ಕೇಳಿದರೆ ಡಿ.ಸಿ ಯವರನ್ನು ಕೇಳಿ ಎಂದು ಹೇಳುತ್ತಾರೆ. ಡಿಸಿಯವರು ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ. ಈ ಸಮಸ್ಯೆಗಳಿಗೆ ಪರಿಹಾರ, ಸ್ಪಷ್ಟತೆ ಕೊಡುವವರು ಯಾರು? ಇದಕ್ಕೆ concerned ಯಾರು ಎನ್ನುವುದನ್ನು ತಾವು ಹೇಳಬೇಕು. ನಾವು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಬೇಕೆಂದರೆ ಕಂದಾಯ ಇಲಾಖೆಯನ್ನು ಪ್ರಶ್ನೆ ಮಾಡಬೇಕೆ? ಜಿಲ್ಲಾ ಪಂಚಾಯತಿಯವರನ್ನು ಕೇಳಬೇಕಾ ಅಥವಾ ನೀರು ಮತ್ತು ನೈರ್ಮಲ್ಯ ಎಂದು ಹೊಸದಾಗಿ ಹುದ್ದೆ ಸೃಷ್ಟಿ ಮಾಡಿದ್ದೀರಲ್ಲಾ, ಆ

ವ್ಯಕ್ತಿಯನ್ನು ಕಾಣಬೇಕಾ? ದುಡ್ಡು ಯಾರ ಹತ್ತಿರ ಇಟ್ಟಿದ್ದೀರಿ? ನಾವು ಯಾರನ್ನು ಕೇಳಬೇಕು?

ಅಧ್ಯಕ್ಷರು:- ಕುಡಿಯುವ ನೀರನ್ನು ಯಾರು ಕೊಡಬೇಕು ಎಂದು ಒಂದು ವ್ಯವಸ್ಥೆ ಇದೆ. ಪ್ರತಿ ತಾಲ್ಲೂಕಿನಲ್ಲಿಯೂ task force ಇದೆ. ಶಾಸಕರೇ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. Task force ಪ್ರಕಾರ ಏನು ತೀರ್ಮಾನ ಮಾಡುತ್ತಾರೆ ಅದಕ್ಕೆ ದುಡ್ಡು ಕೊಟ್ಟರೆ ಸಾಕು, ಅಲ್ಲಿ ಅವರು ಕೆಲಸ ಮಾಡುತ್ತಾರೆ.

ಶ್ರೀ ವೈ.ಎಸ್.ವಿ. ದತ್ತಾ:- ದುಡ್ಡು ಕೊಡುವವರು ಯಾರು?

ಅಧ್ಯಕ್ಷರು:- ಅವೆಲ್ಲಾ ನಿಮಗೆ ಏತಕ್ಕೆ?

ಶ್ರೀ ವೈ.ಎಸ್.ವಿ. ದತ್ತಾ:- ನನಗೆ ಏಕೆಂದರೆ, ನಮ್ಮ ಅಧಿಕಾರಿಗಳು ದುಡ್ಡು ಇಲ್ಲವೆಂದು ಹೇಳುತ್ತಾರಲ್ಲಾ.

ಅಧ್ಯಕ್ಷರು:- ಅದನ್ನು ಹೇಳಿ. ಇದಕ್ಕೆ ದುಡ್ಡು ಕೊಡಿ ಎಂದು ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:- ಅದನ್ನೇ ನಾನು ಹೇಳುತ್ತಿರುವುದು. ಅಧಿಕಾರಿಗಳು ದುಡ್ಡು ಇಲ್ಲವೆಂದು ಹೇಳುತ್ತಾರಲ್ಲಾ.

ಅಧ್ಯಕ್ಷರು:- ಇದೇನೋ ಜಗತ್ತಿನಲ್ಲಿ ಮೊದಲನೆ ಬಾರಿಯೇ ಈ ಹೊಸ ಸರ್ಕಾರ ಬಂದು ಬಿಟ್ಟಿದೆ ಎನ್ನುವಂತಾಗಿದೆ. ವ್ಯವಸ್ಥೆ ಇದೆ, ದುಡ್ಡು ಬೇಕಾಗಿದೆ. ಆ ದುಡ್ಡನ್ನು ಬೇಗನೆ ಬಿಡುಗಡೆ ಮಾಡಿ ಎಂದು ಕೇಳಿ.

ಶ್ರೀ ವೈ.ಎಸ್.ವಿ. ದತ್ತಾ:- ದುಡ್ಡನ್ನು ಬಿಡುಗಡೆ ಮಾಡಿ ಮತ್ತು ಸಂಬಂಧಪಟ್ಟ ಯಾವ ಅಧಿಕಾರಿಗಳ ಮೂಲಕ ಈ ವ್ಯವಸ್ಥೆ ಆಗುತ್ತದೆ ಎನ್ನುವುದನ್ನು ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೂ ಕೂಡ ಇದ್ದಾರೆ. ಅವರೂ ಕೂಡ ಇದರ ಬಗ್ಗೆ ಈಗ ಉತ್ತರ ಕೊಡುವವರಿದ್ದಾರೆ. ಈಗ

ಪ್ರಸ್ತಾಪವಾದಂಥದ್ದು ನೀರಿನ ಸಮಸ್ಯೆ ಬಗ್ಗೆ. ಇದನ್ನು ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ನೀರಾವರಿ ಇಲಾಖೆ ಎಲ್ಲರೂ ಕೂಡ ಸೇರಿ ಮಾಡಬೇಕಾಗುತ್ತದೆ. ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರೂ ಕೂಡ ಉತ್ತರ ಕೊಡುತ್ತಿದ್ದಾರೆ. ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರೂ ಕೂಡ ಉತ್ತರ ಕೊಡುತ್ತಿದ್ದಾರೆ. ಇಬ್ಬರ ಜವಾಬ್ದಾರಿ ಕೂಡ ಇದೆ. ನಾನು ಮುಂಚೆ ಪ್ರಾರಂಭದಲ್ಲಿಯೇ ಅವರಿಗೆ ಹೇಳಿದೆ. ತಾವು ಆವತ್ತು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿದ್ದು ಅದು diversion ಆಯಿತು. ಏಕೆಂದರೆ ಆ ವಿಷಯ ಇದ್ದ ಎರಡು ದಿನಗಳಲ್ಲಿ ಸ್ಪೀಕರ್ ಕೂಡ ಇಕ್ಕಟ್ಟಿಗೆ ಸಿಲುಕಿಕೊಂಡರು. ಸ್ಪೀಕರ್ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಲಹೆ ಕೊಟ್ಟರು. ತಾವೂ ಕೂಡ ಈ ಸ್ಥಾನದಲ್ಲಿದ್ದಂತಹವರು. ಬಜೆಟ್‌ನ ಬಗ್ಗೆ ಸಮಗ್ರವಾದಂತಹ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಎಲ್ಲರೂ ಮಾತನಾಡಿ, ಇದಕ್ಕೆ scope ಇದೆ ಎಂದು ಹೇಳಿದರು. ಇಲ್ಲ, ಇದು ಸಂದರ್ಭವಾಗಿದೆ, ನಾನು ಸ್ವಲ್ಪವಾದರೂ ಮಾತನಾಡಲೇಬೇಕು ಎಂದು ಹೇಳಿ ಮಾನ್ಯ ವಿರೋಧಪಕ್ಷದ ನಾಯಕರು initiate ಮಾಡಿದರು. ತಾವು create ಮಾಡಿಕೊಂಡಿರುವಂಥದ್ದು ಬೇರೆ. ತಾವು ನೀಡಿರುವ ನಿಲುವಳಿ ಸೂಚನೆಯನ್ನು ಮತ್ತೊಂದು ಬಾರಿ ಓದಿ. ಅದು ಬಹಳ specific ಆಗಿದೆ. ತಾತ್ಕಾಲಿಕವಾಗಿ ಬರುವ ಬೇಸಿಗೆ ಏನಿದೆ, ಅದಕ್ಕೆ ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಿ, ಗೋಶಾಲೆಗಳನ್ನು ತೆರೆಯಿರಿ, ಜಾನುವಾರುಗಳಿಗೆ ಮೇವು ಕೊಡಿ ಎನ್ನುವುದು ಮಾತ್ರ ಅದರಲ್ಲಿ ಇತ್ತು. ಆದರೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅದು ಬಹಳ emotional issue ಆಯಿತು. ಎರಡು ದಿನಗಳಿಂದ ಮಾನ್ಯ ಕೃಷ್ಣಾರೆಡ್ಡಿಯವರು, ಮತ್ತಿತರರು ಮಾತನಾಡುವುದನ್ನು ನಾನು ಕೇಳಿದೆ. ಅವರು ಬಹಳ ಉದ್ರೇಕಕ್ಕೆ ಒಳಗಾದರು. ನಾವು ಹೇಳುವುದನ್ನು ಅವರು ಕೇಳುವಂತಹ ಸ್ಥಿತಿಯಲ್ಲಿ ಇರಲಿಲ್ಲ. ನಾನು ಅದನ್ನು ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಶಾಶ್ವತವಾದಂತಹ ಕುಡಿಯುವ ನೀರಿನ ಯೋಜನೆಗಳಿಗೆ ಬಹಳ scope ಇದೆ.

ಕೋಲಾರದಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂದು ಹೇಳಿದರು. ಎತ್ತಿನಹೊಳೆ ಬಗ್ಗೆಯೂ ಮಾತನಾಡಿದರು, ಮೇಕೆದಾಟಿನ ವಿಷಯವೂ ಬಂದಿತು. ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾತನಾಡುವಾಗ ಕಾವೇರಿ, ಕೃಷ್ಣಾ ನೀರಿನ dispute ಬಗ್ಗೆಯೂ ಮಾತನಾಡಿದರು. ಮಾತನಾಡಿದಂತಹ ಎಲ್ಲರೂ ಕೂಡ ಶಾಶ್ವತ ಕುಡಿಯುವ ನೀರಿನ ಬಗ್ಗೆ ಮಾತನಾಡಿದರು. ಆದರೆ ನಿಲುವಳಿ ಸೂಚನೆ ಮಂಡಿಸಿರುವಂಥದ್ದು, ಈಗ ತಕ್ಷಣಕ್ಕೆ ಕುಡಿಯುವ ನೀರಿನ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ? ಇದರ ಬಗ್ಗೆ ವಿಶೇಷವಾದಂತಹ ಗಮನ ಕೊಡಿ, ಇದನ್ನು ಪರಿಹಾರ ಮಾಡಿ, ತಾತ್ಕಾಲಿಕವಾಗಿ ನೀರನ್ನು ಕೊಡಿ, ಗೋಶಾಲೆಗಳನ್ನು ತೆರೆಯಿರಿ ಎಂದು ಇದೆ. ಗೋಶಾಲೆಗಳನ್ನು ಎಷ್ಟು ತೆರೆಯಬೇಕು ಎನ್ನುವುದು ವಿಶೇಷವಾಗಿ ಕಂದಾಯ ಇಲಾಖೆಯ ಜವಾಬ್ದಾರಿಯಾಗಿದೆ. ಮಾನ್ಯ ಕೃಷ್ಣಾರೆಡ್ಡಿಯವರೂ ಕೂಡ ನಮಗೆ ಹೆಚ್ಚು ಗೋಶಾಲೆಗಳು ಬೇಕು ಎಂದು ಹೇಳಿದರು. ನಮಗೇನೂ ತೊಂದರೆ ಇಲ್ಲ. ಎಷ್ಟು ಬೇಕಾದರೂ ಗೋಶಾಲೆಗಳನ್ನು ತೆರೆಯುತ್ತೇವೆ. ಎಷ್ಟು ಬೇಕಾದರೂ ಹಣವನ್ನು ಕೊಡುತ್ತೇವೆ. ಮೇವನ್ನು transportation ನಲ್ಲಿ ತರಲು ವ್ಯವಸ್ಥೆ ಮಾಡಿದ್ದೇವೆ. ಮೇವು ತುಂಬಾ ಇದೆ, ಅದಕ್ಕೆ ಏನೂ ತೊಂದರೆ ಇಲ್ಲ. ಹೊರ ರಾಜ್ಯಗಳಿಗೆ ಕಳುಹಿಸುವುದನ್ನು ರದ್ದು ಮಾಡಿದ್ದೇವೆ. ನಮ್ಮಲ್ಲಿ ಎಲ್ಲೆಲ್ಲಿ ಮೇವು ಸಿಗುತ್ತದೆ, ಎನ್ನುವುದು ನಮ್ಮಗೆಲ್ಲರಿಗೂ ಗೊತ್ತಿರುವಂಥದ್ದು ಚಿಕ್ಕಬಳ್ಳಾಪುರ, ಕೋಲಾರಕ್ಕೆ ಎಲ್ಲಿಂದ ಮೇವು ತರಿಸಬೇಕು, ಆ ಕಡೆ ನಮ್ಮ ಮಾನ್ಯ ಕಾರಜೋಳರವರು ಹೇಳಿದ ಹಾಗೆ, ಅವರಿಗೆ ಹತ್ತಿರದಲ್ಲಿ ಎಲ್ಲಿ ಸಿಗುತ್ತದೆ, ಅಲ್ಲಿಂದ ಯಾವ ಜಿಲ್ಲೆಗಳಿಗೆ ತರಿಸಬೇಕು, ಎಲ್ಲವನ್ನೂ ಕೂಡ ವ್ಯವಸ್ಥೆ ಮಾಡಿದ್ದೇವೆ. ಅದರ ಬಗ್ಗೆ ಸಮಸ್ಯೆ ಏನೂ ಇಲ್ಲ. ಕುಡಿಯುವ ನೀರಿನ ಬಗ್ಗೆ by and large ತಾವೆಲ್ಲರೂ ಕೂಡ ಇವತ್ತು ಹೇಳಿರುವಂಥದ್ದು, ನಮ್ಮ ನಮ್ಮ ತಾಲ್ಲೂಕಿನಲ್ಲಿ ಯಾವ ರೀತಿ ಕುಡಿಯುವ ನೀರಿನ ಸಮಸ್ಯೆ ಇದೆ ಎನ್ನುವುದನ್ನು ಹೇಳಿದರು. ಮಾನ್ಯ ಚಲುವರಾಯಸ್ವಾಮಿಯವರು ಮಾತನಾಡುವಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಯಾವ ರೀತಿ ಇದೆ ಎನ್ನುವುದನ್ನು ಹೇಳಿದರು.

ವಿಶೇಷವಾಗಿ Geologist ನವರನ್ನಾದರೂ ಕಳುಹಿಸಿಕೊಡಿ, ನಮಗೆ ಗೊತ್ತಾಗುತ್ತಿಲ್ಲ. 3–4 ಬೋರ್‌ವೆಲ್‌ಗಳನ್ನು ಕೊರೆದರೂ ನೀರು ಬರುತ್ತಿಲ್ಲ ಎಂದು ಹೇಳಿದರು. ಈಗ ಅದೇ ಪ್ರಶ್ನೆ ಬಂದಿರುವಂಥದ್ದು. ನಾವು ದುಡ್ಡು ಕೊಡುವುದಕ್ಕೆ ಏನೂ ತೊಂದರೆ ಇಲ್ಲ, ಎಷ್ಟಾದರೂ ದುಡ್ಡು ಕೊಡಲಿಕ್ಕೆ ತಯಾರಿದ್ದೇವೆ. ಹಣದ ಕೊರತೆ ಇಲ್ಲ. ಮಾನ್ಯ ಸಭಾಧ್ಯಕ್ಷರು ಏನು task force ಗೆ ಕೊಟ್ಟಿದ್ದೇವೆ, ಅದನ್ನು ಸ್ವಲ್ಪ ಹೆಚ್ಚು ಮಾಡಿ ಎನ್ನುವ ರೀತಿಯಲ್ಲಿ ಹೇಳಿದರು.

ಶ್ರೀ ಎನ್. ಚಲುವರಾಯಸ್ವಾಮಿ:– ದುಡ್ಡಿನ ಸಮಸ್ಯೆ ಇಲ್ಲವೆಂದು ನೀವೂ ಹೇಳುತ್ತೀರಿ, ಆರ್.ಡಿ.ಪಿ.ಆರ್, ಸಚಿವರೂ ಹೇಳುತ್ತಾರೆ. ಬೋರ್‌ವೆಲ್ ಕೊರೆದಿರುವುದಕ್ಕೆ ಬಾಕಿ ಹಣ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಕೋಟಿಯಿಂದ ಎರಡು ಕೋಟಿ ರೂ.ಗಳವರೆಗೆ ಇದೆ. Task force ಮೂಲಕ ನೀರನ್ನು supply ಮಾಡಿರುವವರಿಗೆ 30–40 ಲಕ್ಷ ರೂ.ಗಳ ಹಣ ಕೊಡುವುದು ಬಾಕಿ ಇದೆ. ಏಕೆ ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದೀರಿ? ಜಿಲ್ಲಾಧಿಕಾರಿಗಳು, ನಿಮ್ಮ ಅಧಿಕಾರಿಗಳಿಗೆ ಏಕೆ ಮಾಹಿತಿ ವ್ಯತ್ಯಾಸವಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ನೀವು ಪ್ರಾಮಾಣಿಕವಾಗಿ ಹೇಳುತ್ತಿದ್ದೀರಿ, ದುಡ್ಡನ್ನೂ ಕೊಡುತ್ತೀರಿ. ಅಧಿಕಾರಿಗಳ ಹಂತದಲ್ಲಿ ಏಕೆ communication problem ಆಗುತ್ತಿದೆ? Strict ಆಗಿ ತಾವು ತಾಲ್ಲೂಕು ಮಟ್ಟದಿಂದ ಮಾಹಿತಿಯನ್ನು ತರಿಸಿಕೊಂಡು ಜಿಲ್ಲಾ ಮಟ್ಟದಲ್ಲಿ supply ಮಾಡಿರುವಂಥದ್ದಕ್ಕೆ ಮಾರ್ಚ್ 31 ರೊಳಗೆ ಒಂದು ರೂಪಾಯಿಯೂ ಬಾಕಿ ಇರಬಾರದು ಎಂದು strict ಆಗಿ ಆದೇಶ ಕೊಡಿ. ಇಲ್ಲವೆಂದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ಬೋರ್‌ವೆಲ್ ಬಾಕಿಯ payment ಅನ್ನು clear ಮಾಡಿಸಿ. ಮುಂದೆ emergency ಇರುವಂಥದ್ದಕ್ಕೆ ನೀವು task force ಗೆ, ಬೋರ್‌ವೆಲ್‌ಗೆ, supply ಗೆ ಅವಕಾಶ ಮಾಡಿಕೊಡಿ. ಇಷ್ಟು ಮಾಡಿದರೆ ಅದೇನೂ ದೊಡ್ಡ ವಿಚಾರವಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ನನಗೆ ಅರ್ಥವಾಗಿದೆ. ನಾನು ಹಾಗೂ ಆರ್.ಡಿ.ಪಿ.ಆರ್ ಸಚಿವರು ಸದನದಲ್ಲಿರುವಾಗ ಒಳ್ಳೆಯ ಸಲಹೆಯನ್ನು

ಕೊಟ್ಟಿದ್ದೀರಿ. ನಾನು ಈಗಾಗಲೇ ಹೇಳಿದ್ದೇನೆ. ಮುಂಜಾಗ್ರತಾ ಕ್ರಮವಾಗಿ ಕಳೆದ ವರ್ಷ 2014ರ ಅಕ್ಟೋಬರ್ ತಿಂಗಳಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು, ಎಲ್ಲಾ CEO ಗಳನ್ನು ಕರೆಸಿ ಚರ್ಚೆ ಮಾಡಿದ್ದೇವೆ. ನಮಗೆ ಗೊತ್ತು, ಬೇಸಿಗೆ ಬರುತ್ತಿದೆ, ಆಗ ನೀರಿನ ಅಭಾವವಾಗುತ್ತದೆ, ಜಾನುವಾರುಗಳಿಗೆ ಮೇವಿನ ಕೊರತೆಯಾಗುತ್ತದೆ. ನೀವು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕು. ಹಣಕಾಸಿನ ಬಗ್ಗೆ ತಾವು ಯಾರೂ ಕೂಡ ಯೋಚನೆ ಮಾಡಬಾರದು ಎಂದು ಹೇಳಿದ್ದೇವೆ. ನಾವು video conference ಮಾಡುತ್ತಿರುತ್ತೇವೆ, PD account ಬಗ್ಗೆ ಏನಾದರೂ ಹಣಕಾಸಿನ ತೊಂದರೆ ಇದೆಯೇ ಎಂದು ವಿಚಾರಗಳನ್ನು ತಿಳಿದುಕೊಳ್ಳುತ್ತಿರುತ್ತೇವೆ. Strict ಆಗಿ ಎಲ್ಲರಿಗೂ toll number ಕೊಟ್ಟಿದ್ದೇವೆ. ಎಲ್ಲಿ ಸಮಸ್ಯೆ ಇದೆ, ಅಲ್ಲಿ ಎಲ್ಲರಿಗೂ ಫೋನ್ ನಂಬರ್ ಕೊಟ್ಟಿದ್ದೇವೆ. ಹಗಲು ರಾತ್ರಿ ಸಂಪರ್ಕ ಮಾಡಿದ ತಕ್ಷಣ ನೀವು ಅಲ್ಲಿ ಏನು ಸಮಸ್ಯೆ ಇದೆ ಎಂದು ನೋಡಬೇಕು. ಇದಕ್ಕೆ ಆರ್.ಡಿ.ಪಿ.ಆರ್ ಇಲಾಖೆಯಿಂದ ನೋಡಲ್ ಆಫೀಸರ್ಸ್ ಅನ್ನು ಹಾಕಿದ್ದಾರೆ. ಮಾನ್ಯ ದತ್ತಾರವರೆ, ನಾವು ಮಾಡುವಂತಹ ವ್ಯವಸ್ಥೆಗಳನ್ನೆಲ್ಲಾ ಮಾಡಿದ್ದೇವೆ. ಆರ್.ಡಿ.ಪಿ.ಆರ್ ಇಲಾಖೆಯವರೂ ಕೂಡ ಮಾಡಿದ್ದಾರೆ, ನಾವೂ ಮಾಡಿದ್ದೇವೆ.

ಶ್ರೀ ವೈ.ಎಸ್.ವಿ. ದತ್ತಾ:- ಸಾರ್, ತುಂಬಾ ಸಂತೋಷ. ನಿಮ್ಮ ಕಳಕಳಿ, ಬದ್ಧತೆ ಬಗ್ಗೆ ಖಂಡಿತವಾಗಿಯೂ ನಮ್ಮದೇನೂ ತಕರಾರು ಇಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಅದು ಕಾರ್ಯಗತವಾಗಿಲ್ಲ ಎಂದು ಹೇಳುತ್ತಿದ್ದೀರಿ.

ಶ್ರೀ ವೈ.ಎಸ್.ವಿ. ದತ್ತಾ:- ಕಾರ್ಯಗತವಾಗಿಲ್ಲ. ಏಕೆಂದರೆ, ತಾವು ದುಡ್ಡಿನ ಕೊರತೆ ಇಲ್ಲವೆಂದು ಹೇಳಿದಿರಿ. ನಿಜ, ಬೇಕಾದರೆ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಮಾಹಿತಿಯನ್ನು ತೆಗೆದುಕೊಳ್ಳಿ, ಟ್ಯಾಂಕರ್‌ಗಳಲ್ಲಿ ಆರು ತಿಂಗಳ ಹಿಂದೆ, ಕಳೆದ ಬೇಸಿಗೆಯಲ್ಲಿ ನೀರು ಸರಬರಾಜು ಮಾಡಿರುವವರಿಗೂ ದುಡ್ಡು ಕೊಟ್ಟಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ತಾವು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದೇನೆ. ಮಾತನಾಡಿದಂತಹ ಎಲ್ಲಾ ಸದಸ್ಯರುಗಳು ಏನೇನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ, ಎಲ್ಲೆಲ್ಲಿ ಆಡಳಿತದಲ್ಲಿ ನೀವು ಇಷ್ಟೆಲ್ಲಾ ಮಾತನಾಡಿದರೂ ಅದು ಕಾರ್ಯಗತ ಆಗಿಲ್ಲ, ಇದರಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಅವೆಲ್ಲಾ ನಮ್ಮ ಗಮನಕ್ಕೆ ಬಂದಿದೆ. ಅವೆಲ್ಲವನ್ನೂ ನೋಡುತ್ತಿದ್ದೇವೆ. ಆರ್.ಡಿ.ಪಿ.ಆರ್ ಸಚಿವರೂ ಕೂಡ ಹೇಳಿದ್ದಾರೆ, ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ವಾರಕ್ಕೊಮ್ಮೆ ಸಭೆ ನಡೆಸಿ, ಇದರ ಬಗ್ಗೆ ಪರಿಶೀಲನೆ ನಡೆಸಿ, ಅವರವರ ಜಿಲ್ಲೆಗಳಲ್ಲಿ ಹೇಗೆ ನೀರಿನ ಕೊರತೆ ಇದೆ, ಯಾವ ರೀತಿ ನೀರಿನ ಅಭಾವವಿದೆ, ಎಲ್ಲಿ ನಾವು ನೀರಿನ ಟ್ಯಾಂಕರ್‌ಗಳನ್ನು ಕೊಡುತ್ತೇವೆ ಎನ್ನುವುದು ತಮಗೆ ಗೊತ್ತಿದೆ. ಬೋರ್‌ವೆಲ್‌ಗಳಲ್ಲಿ ನೀರು ಬರದೇ ಇರುವಲ್ಲಿ, water sources ಎಲ್ಲಿಯೂ ಸಿಗದೇ ಇರುವಲ್ಲಿ, ನೀರೇ ಇಲ್ಲವೆಂದಾಗ ಅನಿವಾರ್ಯವಾಗಿ ನಾವು ಟ್ಯಾಂಕರ್‌ಗಳ ಮೂಲಕ ನೀರನ್ನು ಕೊಡಬೇಕಾಗುತ್ತದೆ. ಖಾಸಗಿಯವರೂ ಕೂಡ ಇದ್ದಾರೆ, ಕೆಲವು ಬಾರಿ ಅವರ ಮುಖಾಂತರವೂ ಕೂಡ ತೆಗೆದುಕೊಂಡು ಕೊಡುತ್ತೇವೆ. ಕೊರಟಗೆರೆ ಕ್ಷೇತ್ರದ ಮಾನ್ಯ ಸದಸ್ಯರು ಈಗ ಕೊಡುತ್ತಿರುವ 350 ರೂಪಾಯಿಗಳನ್ನು ಕೊಡುವುದು ಸಾಲುವುದಿಲ್ಲ, ಹೆಚ್ಚಿಗೆ ಹಣ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಟ್ಯಾಂಕರ್‌ಗಳಿಗೆ ಕೊಡುವ ಹಣವನ್ನೂ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಆರ್.ಡಿ.ಪಿ.ಆರ್ ಸಚಿವರಿಗೆ ಆ ಬಗ್ಗೆ ಹೇಳಲಾಗಿದೆ. ಮಾನ್ಯ ಶಿವಲಿಂಗೇಗೌಡರು ಮಾತನಾಡುವಾಗ ನೀವು ಸುಮ್ಮನೆ ಸಿಕ್ಕಿದ ಕಡೆ ಬೋರ್‌ವೆಲ್‌ಗಳನ್ನು ಕೊರೆಸುವ ಬದಲು ನೀರು ಎಲ್ಲಿ ಸಿಗುತ್ತದೆ ಅಲ್ಲಿ ಹಾಕಿ, ಜಿಲ್ಲಾಧಿಕಾರಿಗಳಿಗೆ ಹೇಳಿ, water sources ಅನ್ನು ಸರಿಯಾಗಿ ಪತ್ತೆ ಮಾಡಿ ಅಂತಹ ಕಡೆ ಬೋರ್‌ವೆಲ್‌ಗಳನ್ನು ಹಾಕಿ, ಆಗ ಸಾರ್ಥಕವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ಕೃಷ್ಣಪ್ಪನವರು ಮಾತನಾಡುವಾಗ ಬರಗಾಲಕ್ಕೆ ನಮ್ಮದು ಸೇರಿಸಿಲ್ಲ ಎಂದು ಹೇಳಿದರು. 2014-15 ನೇ ಸಾಲಿನಲ್ಲಿ ಬರಗಾಲ ಪೀಡಿತ ತಾಲ್ಲೂಕುಗಳು ಎಂದು ಘೋಷಣೆ ಮಾಡಿ 1,500 ಟ್ಯಾಂಕರ್‌ಗಳ

ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದೇವೆ. 2015–16ನೇ ಸಾಲು ಈಗ ಬರುತ್ತಿದೆ. ಬರಗಾಲ ಪೀಡಿತ ತಾಲ್ಲೂಕುಗಳು ಎಂದು ಘೋಷಣೆ ಮಾಡಿರುವುದಕ್ಕೆ ಒಂದು criteria ಇಟ್ಟುಕೊಂಡಿರುತ್ತಾರೆ. ಈ ಬಾರಿ ಅದನ್ನು ಮಾಡುತ್ತಿದ್ದೇವೆ. ಏಕೆಂದರೆ ಎಲ್ಲಿ ಮಳೆ ಕೊರತೆ ತುಂಬಾ ಇದೆಯೋ, ಎಲ್ಲಿ ಸತತವಾಗಿ 3–4 ವಾರಗಳ ಕಾಲ ನೀರಿನ ಕೊರತೆ ವಾತಾವರಣ ಇದೆಯೋ, ಹೀಗೆ ಅದಕ್ಕೆ ಒಂದು criteria ಇಟ್ಟುಕೊಂಡಿದ್ದೇವೆ. ಎಲ್ಲಿ ಶೇ.50 ರಷ್ಟು ತೇವಾಂಶದ ಕೊರತೆ ಇದೆ ಎಂಬ ಬಗ್ಗೆ ನೋಡುತ್ತೇವೆ. ಈ ಬಗ್ಗೆ Disaster Management ಗೆ ಎಂದು ಒಂದು ಸಬ್ ಕಮಿಟಿ ಇದೆ, ಅಲ್ಲಿ ನಾವು ಚರ್ಚೆ ಮಾಡಿ, ಹೊಸದಾಗಿ ಏನು ತೆಗೆದುಕೊಳ್ಳಬೇಕು, ಏನು ಮಾಡಬೇಕು ಎನ್ನುವುದನ್ನು ಮಾಡುತ್ತಿದ್ದೇವೆ. ನೀವು ಸಲಹೆಗಳನ್ನು ಕೊಟ್ಟಿದ್ದೀರಿ. ಇಲ್ಲವೆಂದು ಹೇಳುತ್ತಿಲ್ಲ. ತಾವು ಸಲಹೆ ಕೊಟ್ಟಿರುವುದು ಎಲ್ಲವೂ ಸರಿಯಾಗಿದೆ, ಯಾವ ರೀತಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬೇಕು, ಯಾವ ರೀತಿ ತೊಂದರೆ ಇಲ್ಲದ ಹಾಗೆ ಕುಡಿಯುವ ನೀರನ್ನು ಕೊಡಬೇಕು ಎಂದು ಹೇಳಿದ್ದೀರಿ. ಜನ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿಗಾಗಿ ಯಾವ ರೀತಿಯಾಗಿ ಮಾಡಬೇಕು? ಮೇವಿನ ಬ್ಯಾಂಕುಗಳನ್ನು ಯಾವ ರೀತಿಯಾಗಿ ತೆರೆಯಬೇಕು ಮತ್ತು ಗೋಶಾಲೆಗಳನ್ನು ಎಲ್ಲದಕ್ಕೂ ನಾವು ವ್ಯವಸ್ಥಿತವಾಗಿ ಖಂಡಿತವಾಗಿ ಮಾಡುತ್ತೇವೆ. ತಾವುಗಳೆಲ್ಲರೂ ವಿಶೇಷವಾಗಿ ಸದನದ ಗಮನವನ್ನು ಸೆಳೆದಿದ್ದೀರಿ, ಅದಕ್ಕೆ ನಾವು ಖಂಡಿತವಾಗಿ ಮಾಡುವಂತಹ ರೀತಿಯಲ್ಲಿ ನಾವು ಮತ್ತು RDPR ಮಂತ್ರಿಗಳು ಮತ್ತು ಇಲಾಖೆಯವರು ಸೇರಿಕೊಂಡು ಕುಳಿತು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ಸದಸ್ಯರುಗಳು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳೂ ಉತ್ತರವನ್ನು ಕೊಡುತ್ತಾರೆ ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಸನ್ಮಾನ್ಯ ಸಭಾಧ್ಯಕ್ಷರೆ, ಮಾರ್ಚಿ ತಿಂಗಳಿನಲ್ಲಿ ಏಕಿಷ್ಟು ಕಳಕಳಿ ಎಂದರೆ ಏಪ್ರಿಲ್–ಮೇ ತಿಂಗಳಿನಲ್ಲಿ ಆಗುತ್ತಿರುವಂತಹ ಭೀಕರತೆಯನ್ನಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ.

ಇಲ್ಲಿ ನಮ್ಮದು ಒಂದೇ ಒಂದು ಸಲಹೆ ಇದೆ. ಈ ಬೋರ್‌ವೆಲ್‌ಗಳ monitoring system ಅನ್ನು ತಾವು develop ಮಾಡಬೇಕು. ಇಲ್ಲಿ ಏನಾಗುತ್ತದೆ ಎಂದರೆ, ನೀವು ವಾರಕ್ಕೆ ಒಂದು ಸಾರಿ ಮೀಟಿಂಗ್ ಮಾಡಿದರೂ ಸಹ, ತಾವು ಈಗಾಗಲೇ ಹೇಳಿದಂತೆ 0 ನಿಂದ 25 ಎಂದು, ಇದನ್ನೇ ಮಾಡುತ್ತೀರಾ ಹೊರತಾಗಿ ಅದರಿಂದ ಏನೂ ಪರಿಹಾರ ಸಿಗುವುದಿಲ್ಲ. ಪ್ರತಿಯೊಂದು ಗ್ರಾಮದಲ್ಲಿ ಒಂದು ಪ್ರಮುಖವಾದ ಬೋರ್‌ವೆಲ್ ಇರುತ್ತದೆ main water supply bore well, ಅವುಗಳ ಬಗ್ಗೆ monitoring system ಅನ್ನು develop ಮಾಡಬೇಕು. ಆ ಬಗ್ಗೆ ತಾವು every week monitor ಮಾಡಿದರೆ, ಅದರ performance ನೋಡಿಕೊಂಡು ಬೇಕು ಅಥವಾ ಬೇಡವೋ ಎಂದು ಎಲ್ಲವೂ ಸಂಪೂರ್ಣವಾಗಿ ಅರ್ಥವಾಗುತ್ತದೆ. ಕೊನೆಗಳಿಗೆಯಲ್ಲಿ ಎಲ್ಲಿ ಸಿಗುತ್ತದೆಯೋ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕುವುದು ತಪ್ಪುತ್ತದೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ನಾನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನದಿಗಳು ಇಲ್ಲದೆ ಇರುವಂತಹ ಜಿಲ್ಲೆಯಾದ ಚಿತ್ರದುರ್ಗ ಜಿಲ್ಲೆ, ಅದೊಂದು DPD ಆಗಿದೆ. ಒಟ್ಟು ನೀರಿಲ್ಲದೆ ಇರುವಂತಹ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಬಿಜಾಪುರದಂತಹ ನದಿಗಳು ಇರುವಂತಹ ಜಿಲ್ಲೆಗಳಲ್ಲಿಯೂ ಸಹ ಅಷ್ಟೇ ಭೀಕರತೆಯ ಕುಡಿಯುವ ನೀರಿನ ಸಮಸ್ಯೆಯೂ ಸಹ ಇದೆ. ಅಂದರೆ ನೀರು ಇದ್ದೂ ಸಹ ಭೀಕರ ಸಮಸ್ಯೆ ಇದೆ.

ಅಧ್ಯಕ್ಷರು:- ಈಗ ತಾತ್ಕಾಲಿಕವಾಗಿ ಏನು ವ್ಯವಸ್ಥೆ ಮಾಡಬೇಕೆಂಬುದನ್ನು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ:- ಬೇಸಿಗೆಯ ಕಾಲದಲ್ಲಿ ತಾತ್ಕಾಲಿಕವಾಗಿ ನೀರಾವರಿ ನಿರ್ವಹಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಗಮನವನ್ನಿಟ್ಟುಕೊಂಡು ಆ tail end ಗೆ ಮುಟ್ಟುವಂತಹ ರೀತಿಯಲ್ಲಿ ನಿರ್ವಹಣೆಯನ್ನು ಮಾಡಿದರೆ ಬೇಕಾದಷ್ಟು ಹಳ್ಳಿಗಳಿಗೆ, enroute village ಗಳಿಗೆ ನೀರನ್ನು ಕೊಡುವಂತಹ ಸಾಧ್ಯತೆ ಇದೆ. ಅದರ

co-ordination ಅನ್ನು ಮಾಡಿರುವುದಿಲ್ಲ. ನೀರಾವರಿ ಇಲಾಖೆ, ನಿಮ್ಮ ಇಲಾಖೆ, ಮತ್ತು RDPR ಇಲಾಖೆಯವರು ಸೇರಿ co-ordination ಮಾಡಿದರೆ ನಿಮಗೆ surface water ಅನ್ನು ಕೊಡುವುದಕ್ಕೆ ಸಾಧ್ಯತೆ ಇದೆ. ಬೋರ್‌ವೆಲ್‌ಗಳನ್ನು ಹಾಕುವುದನ್ನು ಮತ್ತು ಟ್ಯಾಂಕರ್‌ಗಳ ಮೂಲಕ ನೀರನ್ನು ಕೊಡುವುದನ್ನು ಸಹ ತಪ್ಪಿಸಬಹುದಾಗಿದೆ. ಅಚ್ಚುಕಟ್ಟು ಪ್ರದೇಶದಲ್ಲಿ ಎಲ್ಲೆಲ್ಲಿ ಸಾಧ್ಯತೆ ಇದೆ ಅಲ್ಲಿ ಆ ರೀತಿಯಾಗಿ ದಯವಿಟ್ಟು ನಿರ್ವಹಣೆಯನ್ನು ಮಾಡಬೇಕು.

ಅಧ್ಯಕ್ಷರು:– O.K. ಆಯಿತು, ಸಾಕು.

ಶ್ರೀ ಬಸವರಾಜ ರಾಯರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೆ, 9 ಜಿಲ್ಲೆಗಳ 35 ಬರಪೀಡಿತ ಪ್ರದೇಶಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಈ ವರ್ಷ ಕೊಪ್ಪಳ ಜಿಲ್ಲೆಯಲ್ಲಿ ಯಾವ ತಾಲ್ಲೂಕು ಸಹ ಬರಪೀಡಿತ ಪ್ರದೇಶವೆಂದು ಘೋಷಣೆ ಆಗಿರುವುದಿಲ್ಲ. ಆದರೆ ನಮ್ಮಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆದರೂ ಸಹ ನೀರು ಬರುವುದಿಲ್ಲ. ಈಗಾಗಲೇ ಇರುವ ಬೋರ್‌ವೆಲ್‌ಗಳಿಂದ ನೀರು ಪೂರೈಕೆ ಆಗಿ, ಆ ಬೋರ್‌ವೆಲ್‌ಗಳು dry up ಆಗುತ್ತಿರುತ್ತವೆ. ನಮ್ಮಲ್ಲಿ ಈಗಾಗಲೇ ಉಷ್ಣತೆ ಜಾಸ್ತಿಯಾಗಿದೆ, ಸೂರ್ಯನ ಪ್ರಖರತೆ ಜಾಸ್ತಿ ಇರುವುದರಿಂದ ನಮ್ಮ ಜಿಲ್ಲೆಯಲ್ಲಿ ಉಷ್ಣಾಂಶ 40^0 C ಮೇಲೆ ಇದೆ. ಇನ್ನೊಂದು ವಾರ ಆದರೆ ಕೊಪ್ಪಳ ಜಿಲ್ಲೆ, ರಾಯಚೂರು, ಗುಲ್ಬರ್ಗಾ, ಹೈದರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಉಷ್ಣಾಂಶ 45^0 C ತಲುಪುತ್ತದೆ. ಈ ಪ್ರದೇಶಗಳಿಗೆ already ನೀವು ಎಲ್ಲೆಲ್ಲಿ ಬೋರ್‌ವೆಲ್‌ಗಳಿಂದ ನೀರನ್ನು ಕೊಡುತ್ತಿದ್ದೀರಿ, ಬೋರ್‌ವೆಲ್‌ಗಳು dry up ಆಗಿರುವಂತಹ ಗ್ರಾಮಗಳು ಏನಿವೆ, ಆ ಗ್ರಾಮಗಳಿಗೆ ಪುನರ್ ಬೋರ್‌ವೆಲ್‌ಗಳನ್ನು ಹಾಕಿಸಿ ಕುಡಿಯುವ ನೀರನ್ನು ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ. ಅದರ ಸಲುವಾಗಿ ಈ ಹೈದರಾಬಾದ್–ಕರ್ನಾಟಕ ಜಿಲ್ಲೆಗಳಿಗೆ ತಾವು ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

ಅಧ್ಯಕ್ಷರು:- O.K.

ಶ್ರೀ ಶಿವಾನಂದ ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ ನಾನು ಮಾನ್ಯ ಮಂತ್ರಿಗಳಲ್ಲಿ ಒಂದೇ ಒಂದು ಪ್ರಶ್ನೆಯನ್ನು ಕೇಳಿದ್ದೆ. ನೀವು ಮೇವನ್ನು ಬೆಳೆಯುವುದಕ್ಕಾಗಿ PD Account ನಲ್ಲಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಬರಗಾಲ ಇರುವುದರಿಂದ ಅಲ್ಲಿ ಮೇವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಆ ಹಣವನ್ನು ಮೇವು ಖರೀದಿ ಮಾಡುವುದಕ್ಕಾಗಿ ವರ್ಗಾಯಿಸಬೇಕೆಂಬ ಬಗ್ಗೆ ಒಂದು ಸಲಹೆಯನ್ನು ಮಾಡಿದ್ದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಹೇಳಿದ ಹಾಗೆ ನಮ್ಮಲ್ಲಿ ಬೆಳೆ ಬಂದಿರಬಹುದು, ಆದರೆ ಕುಡಿಯುವುದಕ್ಕೆ ನೀರಿಲ್ಲ. DC ಗಳು ಆಣೇವಾರಿ declare ಮಾಡಿದ್ದಾರೆ.

ಅಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ತಾತ್ಪರ್ಯ ಏನೆಂದರೆ, ರಾಜ್ಯದಲ್ಲಿ ಬರಪೀಡಿತ ಪ್ರದೇಶ ಎಂದು ಘೋಷಣೆಯಾಗಿರಬಹುದು, ಆಗದೇ ಇರಬಹುದು. ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುತ್ತದೆ ಅಥವಾ ಆಗಿದೆ, ಅಂತಹ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ ಸರ್ಕಾರವು ನೋಡುತ್ತದೆ.

(ಗೊಂದಲ)

ಡಾ||ಗುರುಪಾದಪ್ಪ ನಾಗಮಾರಪಲ್ಲಿ:- ಸರ್ಕಾರದವರು ಹಣವನ್ನೇ ಕೊಡುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಕಳೆದ ವರ್ಷ task force ನಲ್ಲಿ 50 ಲಕ್ಷ ರೂಪಾಯಿಗಳ ಕೆಲಸವನ್ನೂ ಕೊಟ್ಟರೆ ಅವರು ಕೆಲಸವನ್ನೂ ಮಾಡಲಿಲ್ಲ

ಮತ್ತು ದುಡ್ಡನ್ನೂ ಸಹ ಕೊಡಲಿಲ್ಲ. ಈ ವರ್ಷ ಆ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ.

ಡಾ|| ಗುರುಪಾದಪ್ಪ ನಾಗಮಾರಪಲ್ಲಿ:- ಕಳೆದ ವರ್ಷ PD Account ಗೆ separate ಆಗಿ ಎಲ್ಲಿ ಹಣವನ್ನು ಕೊಟ್ಟಿದ್ದೀರಿ? ನೀವು ಸುಳ್ಳನ್ನು ಹೇಳುತ್ತಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ಕಳೆದ ವರ್ಷ 50 ಲಕ್ಷ ರೂಪಾಯಿಗಳಷ್ಟು task force ನಿಂದ ಕೆಲಸವನ್ನು ಕೊಟ್ಟೆವು, ಅವರು ಕೆಲಸವನ್ನು ಮಾಡಲಿಲ್ಲ, ಅದಕ್ಕೆ ದುಡ್ಡನ್ನೂ ಸಹ ಕೊಡಲಿಲ್ಲ. ಆ ತರಹ ಈ ವರ್ಷವೂ ಕೂಡ ಆಗಬಾರದು. ಅದು ಹುಸಿ ಆಶ್ವಾಸನೆಯಾಗಬಾರದು. ನಮಗೆ ಕಳೆದ ವರ್ಷ ಆಗರುವ ಅನುಭವದಿಂದ ನಾವು ಈ ಮಾತನ್ನು ಹೇಳುತ್ತಿದ್ದೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಎಲ್ಲಿ 35 ತಾಲ್ಲೂಕುಗಳು ಬರಗಾಲವೆಂದು ಘೋಷಣೆ ಮಾಡಿದ್ದಾರೆ, ಆದಕ್ಕೆ ಮಾತ್ರ ದುಡ್ಡು ಬಂದಿದೆ. ಉಳಿದ ಯಾವ ತಾಲ್ಲೂಕುಗಳಿಗೂ ದುಡ್ಡು ಬಂದಿರುವುದಿಲ್ಲ. ಅದರ ಬಗ್ಗೆ ತಾವು ದಯವಿಟ್ಟು ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಆ ಬಗ್ಗೆ ಸ್ಪಷ್ಟೀಕರಣವನ್ನು ಕೊಡಿ. ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳೆ, ಏಪ್ರಿಲ್ ಮತ್ತು ಮೇ ತಿಂಗಳು ಅರ್ಧ ಭಾಗ ನಮಗೆ ಸಮಸ್ಯೆ ಇರುತ್ತದೆ. ರಾಜ್ಯದ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದರೆ, ನೀವು ಬರಗಾಲ ಎಂದು ಘೋಷಣೆ ಮಾಡಿರಲಿ ಅಥವಾ ಮಾಡದೇ ಇರಲಿ ಆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ war footing ನಲ್ಲಿ ದಯವಿಟ್ಟು ಕೆಲಸವನ್ನು ಮಾಡಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):- War footing ನಲ್ಲಿ ಮಾಡುತ್ತೇವೆ. ನಾನು ತಮಗೆ repeatedly ಹೇಳುತ್ತಿದ್ದೇನೆ. ಬಹಳ ಮುನ್ನೆಚ್ಚರಿಕೆಯಿಂದ ಕಳೆದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಎಲ್ಲಾ

ಜಿಲ್ಲಾಧಿಕಾರಿಗಳು ಮತ್ತು ಸಿಇಒಗಳನ್ನು ಕರೆಸಿ ವಿಶೇಷವಾಗಿ ಈ ಬಗ್ಗೆ ಒಂದು ದಿನ ಚರ್ಚೆ ಮಾಡಿ, ತಾವು ಹೇಳಿದ ಹಾಗೆ ಎಲ್ಲಿ ಬರ ಇದೆಯೋ ಅಥವಾ ಇಲ್ಲವೋ, ಕುಡಿಯುವ ನೀರಿನ ಸಮಸ್ಯೆ ಎಲ್ಲಿದೆ, ಎಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಇದೆಯೋ, ಅವುಗಳಿಗೆ ನೀವು ready ಮಾಡಿಕೊಳ್ಳಬೇಕು. ಇದಕ್ಕೆ ಹಣದ ಕೊರತೆ ಇಲ್ಲ ಎಂದು ಹೇಳಿದ್ದೆವು. ಈ ಬಗ್ಗೆ ಪೂರ್ತಿ details, 35 District ಗಳ ಜಿಲ್ಲಾಧಿಕಾರಿಗಳ PD Account ಗಳಿಗೆ ಎಷ್ಟೆಷ್ಟು ಹಣವನ್ನು ಕಳುಹಿಸಿದ್ದೇವೆ, ಈ ಬಗ್ಗೆ ಪೂರ್ಣ ವಿವರಗಳು ಇವೆ. ತಾವು ಹೇಳಿದ ಹಾಗೆ ವಿಶೇಷವಾಗಿ ಹಾಗೆ ವಿಶೇಷವಾಗಿ ನಮ್ಮ ಗಮನವನ್ನು ಸೆಳೆದಿದ್ದೀರಿ ಮತ್ತು ಈ ಬಗ್ಗೆ ಒಳ್ಳೆಯ ಸಲಹೆಗಳನ್ನು ಸಹ ಕೊಟ್ಟಿದ್ದೀರಿ. ಈ ಬಗ್ಗೆ ಕಾರ್ಯಗತವಾಗಿಲ್ಲವೆಂದು ಕೂಡ ತಾವು ಹೇಳಿದ್ದೀರಿ, ಈ ಬಗ್ಗ ನಾನು ಮತ್ತು RDPR ಮಂತ್ರಿಗಳು ನಾವಿಬ್ಬರೂ ಸಹ ಮಾತನಾಡಿ ತಾತ್ಕಾಲಿಕವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ವಿಶೇಷವಾಗಿ ಗಮನವನ್ನು ಕೊಡುತ್ತೇವೆ.

ಅಧ್ಯಕ್ಷರು:- O.K. ಆಯಿತು.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಈ ಬಗ್ಗೆ ನಾನು ಮಾತನಾಡಿರುವುದಿಲ್ಲ.

ಅಧ್ಯಕ್ಷರು:- ಆಯಿತು ಬಿಡಿ. ಎಲ್ಲವನ್ನು ಮಾನ್ಯ ಸಚಿವರು ಹೇಳಿದ್ದಾರಲ್ಲಾ.

ಶ್ರೀ ಬಿ.ಆರ್. ಯಾವಗಲ್:- ನಾನು ಒಂದು ನಿಮಿಷ ಮಾತನಾಡುತ್ತೇನೆ. ಯಾವುದು ಬರದೇ ಇರುವಂತಹ ವಿಷಯ ನಮ್ಮದಾಗಿದೆ.

ಅಧ್ಯಕ್ಷರು:- ಅದು ಯಾವುದು?

ಶ್ರೀ ಬಿ.ಆರ್. ಯಾವಗಲ್:- ನಮ್ಮಲ್ಲಿ ಕೆರೆಗಳು ಇವೆ.

ಅಧ್ಯಕ್ಷರು:- ಆ ಕೆರೆಯ ಪ್ರಶ್ನೆಯು ಇಲ್ಲಿ ಬರುವುದಿಲ್ಲ. ಇಲ್ಲಿ ನೀವು ಕೆರೆ ನೀರನ್ನು ತಂದುಹಾಕುತ್ತೀರಾ?

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಹೀಗೆ ಹೇಳಿದರೆ ಹೇಗೆ? ಅಪರೂಪಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಆಯಿತು ಹೇಳಿ. ತಾವು ಮಾತನಾಡುವಂತಹ time ನಲ್ಲಿ ಮಾತನಾಡಬೇಕು.

ಶ್ರೀ ಬಿ.ಆರ್. ಯಾವಗಲ್:- ಅವರುಗಳು clarify ಬರಲಿಲ್ಲವೆಂದು ಕೇಳುತ್ತಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಕೆರೆಗಳಲ್ಲಿ ನೀರು ಇರುತ್ತದೆ. ಬಿಸಿಲಿನ ಧಗೆಯಿಂದ, ಬೇರೆಬೇರೆ ಕಾರಣಗಳಿಂದ ಅದು ಕೆಟ್ಟುಹೋಗುತ್ತದೆ. ಆ ನೀರನ್ನು ಕುಡಿಯುವ ಹಾಗಿಲ್ಲ, ಅದನ್ನು purify ಅಥವಾ ಶುದ್ಧೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದನ್ನು ಮಾಡುವುದಕ್ಕಾಗಿ ಜನರ ಬೇಡಿಕೆ ಇವತ್ತು ಇದೆ. ಆದಷ್ಟು ಕನಿಷ್ಟ ಕುಡಿಯುವುದಕ್ಕಾಗಿ, ಶುದ್ಧ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ, machine ಅನ್ನು, plant ಅನ್ನು ಹಾಕಿಕೊಡುವಂತಹ ಬೇಡಿಕೆ ಬಹಳ ಇದೆ.

ಅಧ್ಯಕ್ಷರು:- ಈಗ ಅದು urgent ಆಗಿ ಆಗುತ್ತದೆಯೇ?

ಶ್ರೀ ಬಿ.ಆರ್. ಯಾವಗಲ್:- ಅದನ್ನು ಮಾಡಬಹುದು. Buildings ಇದೆ, ಮತ್ತೊಂದು ಇದೆ.

ಅಧ್ಯಕ್ಷರು:- ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಪ್ರಶ್ನೆ ಬಂದಾಗ ಅವೆಲ್ಲವೂ ಬರುತ್ತದೆ. ಈಗ ತಾತ್ಕಾಲಿಕವಾಗಿ ಬೇಸಿಗೆಯ ಕಾರಣದಿಂದಾಗಿ ಉಂಟಾಗಿರುವ ಸಮಸ್ಯೆ ಬಗ್ಗೆ ಚರ್ಚಿಸುತ್ತಿದ್ದೇವೆ. ಮಾನ್ಯ ಪಾಟೀಲ್‌ರವರೆ ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ

ನಾಯಕರು ಮತ್ತು ಗೌರವಾನ್ವಿತ ಸದಸ್ಯರುಗಳೆಲ್ಲರೂ ಕುಡಿಯುವ ನೀರಿನ ವಿಚಾರವಾಗಿ ಬಹಳಷ್ಟು ತಮ್ಮ ಆತಂಕವನ್ನು, ಕಳಕಳಿಯನ್ನು ವ್ಯಕ್ತಮಾಡಿದ್ದಾರೆ, ಈ ಬಗ್ಗೆ ಹಲವಾರು ಸಲಹೆಗಳನ್ನು ಸರ್ಕಾರಕ್ಕೆ ನೀಡಿದ್ದಾರೆ. ಆದರೆ ಈ ಚರ್ಚೆಯ ಸಂದರ್ಭದಲ್ಲಿ ಎಲ್ಲೋ ಒಂದು ಕಡೆಯಲ್ಲಿ, ನಾವು ದುಡ್ಡು ಕೊಟ್ಟಿದ್ದೇವೆ, task force ಎಂದು ಏನು ಮಾಡಿದ್ದೇವೆ, ಅದರ operation ಯಾವ ಪರಿಣಾಮದಲ್ಲಿ ಆಗಬೇಕಾಗಿತ್ತೋ, ಅದು ಆಗಿಲ್ಲವೆನ್ನುವಂತಹ ಭಾವನೆ ನನಗೆ ವೈಯಕ್ತಿಕವಾಗಿ ಬರುತ್ತಿತ್ತು. ಎಲ್ಲಾ ಸದಸ್ಯರುಗಳು ದುಡ್ಡು release ಮಾಡಿಲ್ಲ. ದುಡ್ಡಿಲ್ಲ, ಸನ್ಮಾನ್ಯ ಸ್ನೇಹಿತರಾದ ಬಸವರಾಜ ಬೊಮ್ಮಾಯಿಯವರು ಹೋದ ಸಲ task force ನ ಕೆಲಸದ ಪ್ರಸ್ತಾವನೆ ಬಗ್ಗೆ ಅದಕ್ಕೆ ದುಡ್ಡು ಬರಲಿಲ್ಲ ಎಂದು ಹೇಳಿದರು. ನನ್ನ ಹತ್ತಿರ ಇರುವಂತಹ, ಅಂಕಿ–ಸಂಖ್ಯೆಯನ್ನು, ನಮ್ಮ ಅಧಿಕಾರಿಗಳು ಕೊಟ್ಟಿರುವಂತಹ ಅಂಕಿಸಂಖ್ಯೆಯನ್ನು ನಿಮಗೆ ಹೇಳಿದರೆ ಆಶ್ಚರ್ಯವಾಗುತ್ತದೆ.

ಅಧ್ಯಕ್ಷರು:– ಮಾನ್ಯ ಪಾಟೀಲ್‌ರವರೆ, ಮಾನ್ಯ ಸದಸ್ಯರುಗಳು ಈಗ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆ ಬಗ್ಗೆ ನೀವು ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಸಮಾಲೋಚನೆಯನ್ನು ನಡೆಸಿ, ಅವರು ಹೇಳಿರುವುದು ನಿಜವೆಂದರೆ ಅದಕ್ಕೆ ಹಣವನ್ನು ಬಿಡುಗಡೆ ಮಾಡಿ. ಒಂದು ವೇಳೆ ಅದು ಸರಿಯಲ್ಲವೆಂದರೆ ಆ ಪ್ರಶ್ನೆಯೇ ಇಲ್ಲ. ಒಟ್ಟಿನಲ್ಲಿ ಬರಗಾಲದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗಾಗಿ ಏನೇನು ಹಣ ಖರ್ಚು ಆಗಿರುತ್ತದೆ, ನೀರನ್ನು ಕೊಡದಲ್ಲಿ ತಂದು ಹಾಕಿರಬಹುದು, ಕಷ್ಟಪಟ್ಟು ತಂದಿರಬಹುದು, ಆ ದುಡ್ಡನ್ನು ಬೇಗ ಬಿಡುಗಡೆ ಮಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಕಳೆದ ಬಾರಿ task force ಗೆ ದುಡ್ಡು ಕೊಡುತ್ತೇನೆಂದು ಹೇಳಿದ್ದೀರಿ, ನೀವು ಅಲ್ಲಿ ಕೆಲಸ ಮಾಡಿದ್ದಕ್ಕೆ ದುಡ್ಡನ್ನು release ಮಾಡಿದ್ದರೆ, ನೀವು ಹೇಳಿದಂತೆ ನಾವು ಕೇಳುತ್ತೇವೆ. ಇಲ್ಲಿ ನಾವೇನು ಸುಳ್ಳು ಹೇಳುತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:– ನೀವು ಸುಳ್ಳು ಹೇಳುತ್ತಿದ್ದೀರೆಂದು ಹೇಳಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ವಾಪಸ್ಸು ತೆಗೆದುಕೊಂಡು ಹೋಗಿರುವ ಹಿನ್ನೆಲೆಗೆ ಸಂಬಂಧಿಸಿದಂತೆ ಬೇಕಾದಷ್ಟು ಫೈಲ್‌ಗಳು ಇವೆ. ಇದು ಬೇಕಾದಷ್ಟು ನಡೆಯುತ್ತದೆ. ನೀವು ಅಧಿಕಾರಿಗಳು ಕೊಟ್ಟಿರುವಂತಹ ಅಂಕಿ-ಅಂಶಗಳಿಂದಲೇ ಸಮರ್ಥನೆ ಮಾಡುತ್ತೇನೆಂದರೆ, ಎಲ್ಲೋ ನಿಮಗೆ reality ಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:- ಆಯಿತು. ಮಾನ್ಯ ಸಚಿವರೆ ತಾವು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್:- ನಾವು ಏನೇನು ಕಾರ್ಯಕ್ರಮಗಳನ್ನು ಮಾಡಿದ್ದೇವೆ, ಆ ವಿವರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಹೋದ ವರ್ಷ task force ನ್ನು ಸ್ಥಾಪನೆ ಮಾಡಿದ್ದೇವೆ. ಯಾವ ಕಾರಣಕ್ಕೆ ಎಂದರೆ Rural Drinking Water Supply ಗೆ. RDPR ನವರು ಏತಕ್ಕಾಗಿ task force ಅನ್ನು ಸ್ಥಾಪನೆ ಮಾಡಿದ್ದಾರೆಂದರೆ, ಅಂದು ಕಂದಾಯ ಇಲಾಖೆ ಬರ ಇರುವಂಥ ಸಂದರ್ಭದಲ್ಲಿ, ಆ ಕುಡಿಯುವ ನೀರಿನ ಸಮಸ್ಯೆಯನ್ನು ಗಮನಿಸತಕ್ಕಂಥ ಮೇಲ್ವಿಚಾರಣೆ ಮಾಡುವಂಥ ಪದ್ಧತಿ ನಮ್ಮ ರಾಜ್ಯದಲ್ಲಿದ್ದಾಗ್ಯೂ, ಚುನಾವಣೆಗಳ ಸಂದರ್ಭದಲ್ಲಿ, ಚುನಾವಣೆಗಳಲ್ಲಿ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು ತೊಡಗಿಸಿಕೊಂಡಿರುತ್ತಾರೆನ್ನುವಂಥ ಕಾರಣದಿಂದ, ನಾವು ಶಾಸಕರ ಅಧ್ಯಕ್ಷತೆಯಲ್ಲಿ Task Force ಅನ್ನು ನೇಮಕ ಮಾಡಿ, ಅದಕ್ಕೆ ನಮ್ಮ ಆರ್.ಡಿ.ಪಿ.ಆರ್. ತಾಲ್ಲೂಕು ಪಂಚಾಯಿತಿಯ E.O. ಅವರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿ, ಆ ಒಂದು Task Force ಕೆಲಸ ಮಾಡುವುದಕ್ಕೆ ಪ್ರಾರಂಭವಾಯಿತು. ದಿನಾಂಕ: 26.04.2014 ಕ್ಕೆ 100.00 ಕೋಟಿ ರೂಪಾಯಿಗಳನ್ನು ನಾವು Task Force ಗೆ release ಮಾಡಿದ್ದೇವೆ. ದಿನಾಂಕ: 20.10.2014 ಕ್ಕೆ 68.00 ಕೋಟಿ ರೂಪಾಯಿಗಳನ್ನು ನಾವು Task Force ಗೆ release ಮಾಡಿದ್ದೇವೆ. ದಿನಾಂಕ: 15.11.2014 ಕ್ಕೆ 11.00 ಕೋಟಿ ರೂಪಾಯಿಗಳನ್ನು release ಮಾಡಿದ್ದೇವಬೆ. One second, ಪೂರ್ಣ ಮಾಹಿತಿಯನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್:- ನಮಗೆ ಅದರ ಬಗ್ಗೆ copy ಕಳುಹಿಸಿ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಈಗ ನೀವು release ಮಾಡಿರುವ ಹಣದಿಂದ ನಮ್ಮ Task Force ಕೆಲಸ approval ಮಾಡಲಿಲ್ಲವೆಂದರೆ, ಆ ದುಡ್ಡು release ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ, ನೀವು ಕ್ರಮ ತೆಗೆದುಕೊಳ್ಳುವಿರಾ?

ಅಧ್ಯಕ್ಷರು:- ಕ್ರಮ ತೆಗೆದುಕೊಳ್ಳಲೇಬೇಕಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ:- ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ಆಯಿತು, ಅವರು ಉತ್ತರವನ್ನು ಪೂರೈಸಲಿ ಬಿಡಿ.

ಶ್ರೀ ಹೆಚ್.ಕೆ. ಪಾಟೀಲ್ :- ದಿನಾಂಕ: 11.03.2015 ಕ್ಕೆ 2.00 ಕೋಟಿ ರೂಪಾಯಿಗಳನ್ನು release ಮಾಡಿದ್ದೇವೆ. ದಿನಾಂಕ: 11.03.2015 ಕ್ಕೆ ಮತ್ತೊಂದು ಆದೇಶದಲ್ಲಿ 60.00 ಲಕ್ಷ ರೂಪಾಯಿಗಳನ್ನು release ಮಾಡಿದ್ದೇವೆ. ದಿನಾಂಕ: 13.03.2015 ಕ್ಕೆ 85:89 ಕೋಟಿ ರೂಪಾಯಿಗಳನ್ನು ನಾವು Task Force ಗೆ release ಮಾಡಿದ್ದೇವೆ. ಒಟ್ಟು ನಾವು 267.49 ಕೋಟಿ ರೂಪಾಯಿಗಳನ್ನು Task Force ಗೆ ಬಿಡುಗಡೆ ಮಾಡಿದ್ದೇವೆ. ಆದರೆ ನಾವು ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿರುವಂಥ ಈ Task Force ನ ನಿರ್ಣಯಗಳಂತೆ ಖರ್ಚಾಗಿರುವ ಹಣ 99.00 ಕೋಟಿ 6 ಲಕ್ಷ ರೂಪಾಯಿಗಳನ್ನು ಮಾತ್ರ, ಇನ್ನೂ 168.42 ಕೋಟಿ ರೂಪಾಯಿಗಳನ್ನು ಹಣ ನಿಮ್ಮ Task Force ಸುಪರ್ದಿಯೊಳಗೆ ಇದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಈ ಕೈ ಏನು ಮಾಡುತ್ತಿದೆ ಎಂದು ಸರ್ಕಾರಕ್ಕೆ ಗೊತ್ತಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ಅವರು ಉತ್ತರವನ್ನು ಕೊಟ್ಟ ಮೇಲೆ ಕೇಳಿ. ಅವರಿಗೆ ಉತ್ತರ ಪೂರೈಸಲಿಕ್ಕೆ ಬಿಡಿ.

(ಗೊಂದಲ)

ಅಧ್ಯಕ್ಷರು:- ರವಿಯವರೆ, ಅವರು ಮೊದಲು ಉತ್ತರ ಹೇಳಲಿ ಬಿಡಿ.

ಶ್ರೀ ಸಿ.ಟಿ. ರವಿ:- ಕನ್ನಡಿಯೊಳಗೆ ನಿಧಿ ಇಟ್ಟುಬಿಟ್ಟು ಕನ್ನಡಿಯನ್ನು ತೋರಿಸಿ ಬಿಡಲಿ.

ಅಧ್ಯಕ್ಷರು:- ಆಯಿತು.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- ಸಿ.ಟಿ. ರವಿಯವರೆ, ನಾನು ಈ ಅಂಕಿಗಳನ್ನು ಹೇಳುವಾಗ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. If I am wrong, it is not I alone who is going to be punished. It is my officers who are going to be punished. ಅದಕ್ಕೆ ಎಲ್ಲೋ ಒಂದು ಕಡೆ, ಇದಕ್ಕೆ ಕೊನೆ ಹಾಡಲೇಬೇಕಲ್ಲಾ. ನೀವು ಹಾಗೆ ಹೇಳಿದಿರಿ, ನಾವು ಕೊಟ್ಟಿದ್ದೇವೆಂದರೆ ಮುಗಿಯುತ್ತದೆಯೇ?

(ಗೊಂದಲ)

ಅಧ್ಯಕ್ಷರು:- ದತ್ತರವರೆ, ಸಚಿವರು ಉತ್ತರ ಹೇಳಲಿ ಬಿಡಿ. ಪಾಟೀಲರೆ ನೀವು ಉತ್ತರ ಹೇಳಿ.

ಶ್ರೀ ಪಿ.ಟಿ. ಪರಮೇಶ್ವರ್ ನಾಯ್ಕ್ (ಮಾನ್ಯ ಕಾರ್ಮಿಕ ಸಚಿವರು):- ಸಚಿವರು ಮೊದಲು ಉತ್ತರವನ್ನು complete ಮಾಡಲಿ.

ಅಧ್ಯಕ್ಷರು:- ಸಚಿವರು ಉತ್ತರ ಹೇಳಲಿ, ಆಮೇಲೆ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್:- ನಾನು ಸದುದ್ದೇಶದಿಂದ ಎಲ್ಲವನ್ನು ನಿಮ್ಮ ಎದುರಿಗೆ ತೆರೆದಿಡುತ್ತಿದ್ದೇನೆ. ಈ 168 ಕೋಟಿ ರೂಪಾಯಿಗಳ ಬಗ್ಗೆ ನನ್ನ ಹತ್ತಿರ ಜಿಲ್ಲಾವಾರು details ಇವೆ. Averange ಒಂದೊಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ದಿನಾಂಕ: 13.03.2015 ರಂದು ಬಿಡುಗಡೆ ಮಾಡಿದ್ದನ್ನು ಹಿಡಿದುಕೊಂಡು, ಒಂದು ಕೋಟಿ ರೂಪಾಯಿಗಳಷ್ಟು ಹಣ ಒಂದು ಕ್ಷೇತ್ರದಲ್ಲಿ ಇವತ್ತು ಹಣ balance ಇದೆ. ಈ ಹಣವನ್ನು ನಾವು ಖರ್ಚು ಮಾಡಬೇಕು.

ಶ್ರೀ ಎನ್. ಚೆಲುವರಾಯಸ್ವಾಮಿ:- ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆ ಒಂದು ಕೋಟಿ ರೂಪಾಯಿಗಳಲ್ಲಿ ನಿಮ್ಮ ಅಧಿಕಾರಿಗಳು ಯಾವ್ಯಾವ ಬೋರ್‌ವೆಲ್‌ಗಳನ್ನು ಸೇರಿಸಿಕೊಂಡಿದ್ದಾರೋ ಗೊತ್ತಿಲ್ಲ. ಅವರು ನಮ್ಮನ್ನೇನು ಕೇಳಿಲ್ಲ. ನಾವು ಬಾಕಿ ಇದೆ ಎಂದು ಕೇಳುತ್ತಿದ್ದೇವೆ.

ಶ್ರೀ ಹೆಚ್.ಕೆ. ಪಾಟೀಲ್:- ನೀವು ಆ Task Force ಅಧ್ಯಕ್ಷರು.

ಅಧ್ಯಕ್ಷರು:- ಈಗ, ಚೆಲುವರಾಯಸ್ವಾಮಿ, ಒಂದು ನಿಮಿಷ ನಾನು ಹೇಳುವವರೆಗೆ ಕೇಳಿ ಮಹರಾಯರೆ, ಈಗ ನೋಡಿ, ಅವರು ಹೇಳಿರುವ ಪ್ರಕಾರ Task Force ಪ್ರತಿ ತಾಲ್ಲೂಕಿನಲ್ಲಿ ಮಾಡಿದ್ದಾರೆ. ಶಾಸಕರೇ ಅದರ ಅಧ್ಯಕ್ಷರಾಗಿದ್ದಾರೆ. ಈ ಕುಡಿಯುವ ನೀರಿನ ಸಮಸ್ಯೆಗೆ ನೀವೇನು ಕಾರ್ಯಕ್ರಮವನ್ನು ರೂಪಿಸುತ್ತೀರಿ, ಅದನ್ನು ಜಾರಿಗೊಳಿಸುವಂಥ ಕೆಲಸ ಸರ್ಕಾರದ್ದು. ಆ ಕೆಲಸ ಆಗಿದೆಯೇ ಇಲ್ಲವೇ? ಒಂದು ವೇಳೆ ಆಗದೇ ಹೋಗಿದ್ದರೆ ಅದನ್ನು ಅವರ ಗಮನಕ್ಕೆ ತನ್ನಿ.

ಶ್ರೀ ಎನ್. ಚೆಲುವರಾಯಸ್ವಾಮಿ:- Task Force ಗೂ ಇದಕ್ಕೂ ಸಂಬಂಧವಿಲ್ಲ. ನಿಮ್ಮ ಜಿಲ್ಲಾ ಪಂಚಾಯಿತಿ ಆಡಳಿತದಲ್ಲಿ ಮಾಡಿದ್ದಾರೆ. 40.00 ಲಕ್ಷ ರೂಪಾಯಿಗಳನ್ನು ಮಾತ್ರ ಮೊನ್ನೆ Task Force ಗೆ ಕೊಟ್ಟಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:- ನಾನು Task Force ಗೆ ಕೊಟ್ಟಿರುವುದನ್ನು....

ಶ್ರೀ ಎನ್. ಚೆಲುವರಾಯಸ್ವಾಮಿ:- ನಮಗೆ ಬೇಕಾಗಿರುವುದು ಇಷ್ಟೇ ಸ್ವಾಮಿ. Straight ಒಂದೇ question. ದಯಮಾಡಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಮಗೆ As on March 31st ಗೆ ಕಳೆದ ವರ್ಷದಿಂದ, ಈ ಸರ್ಕಾರ ಬಂದಾಗಿನಿಂದ, ಬೋರ್‌ವೆಲ್‌ಗಳನ್ನು emergency ಗೆ ನಿಮ್ಮ Task Force ಮೂಲಕ, ಇಲಾಖೆಯ ಮೂಲಕ, ಜಿಲ್ಲಾ ಪಂಚಾಯಿತಿ ಮೂಲಕ ಯಾರು ಕೊರೆದಿದ್ದಾರೆ, ಅದನ್ನು action plan ಗಾದರೂ ಸೇರಿಸಿ, ಬಾಕಿಯನ್ನಾದರೂ payment ಮಾಡಿ. ಎರಡನೆಯದಾಗಿ, supply ಮಾಡಿರುವ ನೀರನ್ನು ರೆವಿನ್ಯೂ ಇಲಾಖೆಯವರು, ನಿಮ್ಮ ಇಲಾಖೆಯೋ ಅಥವಾ ಜಿಲ್ಲಾಡಳಿತವೋ, supply ಮಾಡಿರುವಂಥ water supply ಗೆ ಬಾಕಿ payment ಮಾಡಿಸಿ. ಇಷ್ಟು ಮಾಡಿಸಿ, ಮುಂದಕ್ಕೆ emergency ಗೆ ಬೇಕಾಗಿರುವ ಕಾರ್ಯಕ್ರಮಗಳೇನಾದರೂ ತೆಗೆದುಕೊಳ್ಳಿ, ನಾವ್ಯಾರು ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು:- ನೀವು ಉತ್ತರ ಹೇಳಿ ಮಹರಾಯರೆ.

ಶ್ರೀ ಹೆಚ್.ಕೆ. ಪಾಟೀಲ್:- ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ. ನಿಮಗೆ ನಾವು ಬಾಕಿ ಕೊಟ್ಟರೆ ಸಮಸ್ಯೆ ಬಗೆಹರಿಯುವುದಿಲ್ಲ. ನಿಮಗೇನು ನಾವು ಹಣ ಕೊಟ್ಟಿದ್ದೇವೆ, ಅದನ್ನು ನಿಮ್ಮ ಆಣತಿ ಪ್ರಕಾರ ಅವರು ಖರ್ಚು ಮಾಡಬೇಕು. ಆ ರೀತಿ ಅವರು ಮಾಡದೇ ಹೋದರೆ ಆ ಅಧಿಕಾರಿ, ಈ ರೀತಿ ಉದ್ಧಟತನ ಮಾಡಿದ್ದಾನೆಂದು ಹೇಳಿ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಶಾಸಕರ ಅಧ್ಯಕ್ಷತೆಯಲ್ಲಿರುವ ಈ ಸಮಿತಿ ತೆಗೆದುಕೊಳ್ಳುವಂಥ ನಿರ್ಣಯವನ್ನು ಅನುಷ್ಠಾನ ಮಾಡಬೇಕು. ಅದಕ್ಕಾಗಿ ಹಣ ಕೊಟ್ಟಿದ್ದೇನೆ. ಹಣ ಇಲ್ಲವೆಂದರೆ ಹೇಳಿ, ಹಣವನ್ನು ಮತ್ತೆ ಕೊಡೋಣ.

ಶ್ರೀ ವೈ.ಎಸ್.ವಿ. ದತ್ತ:- ಮಾನ್ಯ ಸಚಿವರೇ, ನೀವು ಒಂದು ಕೋಟಿ ರೂಪಾಯಿಗಳೆಂದು ಇಲ್ಲಿ ಹೇಳುತ್ತಿದ್ದೀರಿ. ಆದರೆ ಎಲ್ಲಾ ಕಡೆಗಳಲ್ಲಿಯೂ ಬಂದಿರುವುದು 40.00 ಲಕ್ಷ ರೂಪಾಯಿಗಳು ಮಾತ್ರ.

ಶ್ರೀ ಹೆಚ್.ಕೆ. ಪಾಟೀಲ್:- ನೋಡಿ, ನೀವು ಮೊನ್ನೆ ಬಂದಿದ್ದಷ್ಟೇ ಹೇಳಿದರೆ ಹೇಗೆ? ನಾನು ನಿಮಗೆ ಪ್ರಾರಂಭದಿಂದ..

ಶ್ರೀ ಬಸವರಾಜ ರಾಯರೆಡ್ಡಿ:- ಇದ್ದುದನ್ನು ಹೇಳುತ್ತೇನೆ, ಬಂದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- ಬಂದಿಲ್ಲವೆಂದರೆ ಹೇಗೆ? ಇಲ್ಲಿ statement ಇದೆ ನೋಡಿ. I say, I will undergo punishment if these figures are wrong.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ:- ಮಾನ್ಯ ಮಂತ್ರಿಗಳೇ, 1.00 ಕೋಟಿ ರೂಪಾಯಿಗಳಿಗೂ ಶಾಸಕರ Task Force ಗೂ ಸಂಬಂಧವಿಲ್ಲ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ, ರಾಯರೆಡ್ಡಿ ತಾಳಿ.

ಶ್ರೀ ಬಸವರಾಜ ರಾಯರೆಡ್ಡಿ:- ಸಚಿವರು ಹೇಳುವುದು ಅಸತ್ಯವಿದೆ ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಇದಕ್ಕೆ ಪರಿಹಾರ ಏನಿದೆ, ಅದರ ಬಗ್ಗೆ ಸಚಿವರು ಹೇಳುತ್ತಿಲ್ಲ. ನೀವು ಯಾವ Head ನಲ್ಲಿ release ಮಾಡಿದ್ದೀರಿ ಎಂದು ಹೇಳಿಬಿಡಿ, ನಮಗೆ ಗೊತ್ತಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ:- ಅವರು ಹೇಳುವುದು ಸರಿಯಿರಬಹುದು, ಆದರೆ ಕುಡಿಯುವ ನೀರಿಗೆ ನಮ್ಮಲ್ಲಿ ಹಣ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಕುಡಿಯುವ ನೀರಿಗೆ Calamity Relief Fund ನಲ್ಲಿ ಹಣ ಬಿಡುಗಡೆ ಮಾಡಿರಬಹುದು, ಆದರೆ ನಮ್ಮಲ್ಲಿ ಹಣವಿಲ್ಲ. ಅದನ್ನೇ ಚೆಲುವರಾಯಸ್ವಾಮಿಯವರು ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು:- ನಾನು ನಿಮಗೆ ಒಂದು ಸಲಹೆಯನ್ನು ಕೊಡುತ್ತೇನೆ ಸ್ವಲ್ಪ ತಾಳಿ. ಈಗ ಸಚಿವರೇ ಒಂದು ಕೆಲಸ ಮಾಡಿ. ಈಗ ಒಂದು ವಾರ ನಮ್ಮ ಶಾಸನ ಸಭೆ ನಡೆಯುತ್ತದೆ. ಸದನ 31ನೇ ತಾರೀಖು ಮುಗಿಯುತ್ತದೆ. ಮೊದಲು ಪ್ರತಿ ಜಿಲ್ಲೆಗಳಲ್ಲಿ ಎಲ್ಲಾ ಶಾಸಕರ ಸಭೆ ಕರೆಯಲಿಕ್ಕೆ ಒಂದು ಸೂಚನೆಯನ್ನು ಕೊಡಿ. 1ನೇ ತಾರೀಖು, ಅಥವಾ 2ನೇ ತಾರೀಖು ಎಲ್ಲಾ ಶಾಸಕರ ಸಭೆಯನ್ನು ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕರೆಯಲಿ. ಅಲ್ಲಿ ಸಭೆ ಕರೆದು, ನೀವು ಹಣವನ್ನು ಎಷ್ಟು ಬಿಡುಗಡೆ ಮಾಡಿದ್ದೀರಿ? ಹಿಂದಿನ ಸಾರಿ ಬಿಡುಗಡೆಯಾದ ಹಣದಲ್ಲಿ ಎಷ್ಟು ಖರ್ಚಾಗಿದೆ? ಎಷ್ಟು ಖರ್ಚಾಗಿಲ್ಲ? ಈಗ ತಕ್ಷಣಕ್ಕೆ ಏನು ಕಾಮಗಾರಿ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಒಂದು ತೀರ್ಮಾನ ಮಾಡಿ. ಆ ಪ್ರಕಾರ ಈಗ ಏನೇನು ಸಮಸ್ಯೆ ಬಂದಿದೆ, ಅವೆಲ್ಲಾ ಪರಿಹಾರವಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್:- ನಾನು ತಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಒಂದು second ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ:- ಈ ಹಣವನ್ನು ಯಾವ Head ನಲ್ಲಿ release ಮಾಡಿದ್ದೀರಿ ಎಂಬುದನ್ನಾದರೂ ನನಗೆ ಹೇಳಿ. Calamity Relief Fund ನಲ್ಲಿ ಮಾಡಿರುವಿರಾ? ಅಥವಾ ನಿಮ್ಮ regular Rural Development Drinking Water ನಲ್ಲಿ ಮಾಡಿರುವಿರಾ ಹೇಳಿ? ಇದು Task Force ಗೆ ಬರುತ್ತದೆ. ಇಲ್ಲವೇ ಬೇರೆ Scheme ಗಳಲ್ಲಿ ಆದರೆ ಅದು ನಮ್ಮ ಗಮನಕ್ಕೆ ಬರುವುದಿಲ್ಲ. ಅದನ್ನು ನಿಮ್ಮ ಅಧಿಕಾರಿಗಳೇ ಮಾಡುತ್ತಾರೆ. ಏಕೆಂದರೆ ಅದು ZP Head ಗೆ ಹೋಗಿರುತ್ತದೆ.

SRI. H.K. PATIL:- I am not telling about other heads. I am telling what was released to Task Force.

ಅಧ್ಯಕ್ಷರು:- ಅದು ಯಾವ Head ಗಾದರೂ ಹೋಗಲಿ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಳ್ಳುವುದಕ್ಕೆ ಅವಕಾಶ ಇದ್ದರೆ ಸರಿಯಲ್ಲವೇ ಮಹರಾಯರೇ?

ಶ್ರೀ ಎನ್. ಚೆಲುವರಾಯಸ್ವಾಮಿ:- ನಾವು ಜವಾಬ್ದಾರಿಯುತವಾಗಿ ನಿಮಗೆ ಕೇಳುತ್ತಿದ್ದೇವೆ. ನಿಮ್ಮ 1.00 ಕೋಟಿ ರೂಪಾಯಿಗಳು Task Force ಗೆ ಬಂದಿಲ್ಲ. 40.00 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ. ದಯಮಾಡಿ ನಿಮ್ಮ record ಸುಳ್ಳಾಗುವುದು ಬೇಡ, ನಾವು ಹೇಳುತ್ತಿದ್ದೇವೆ. ನಿಮ್ಮ ಅಧಿಕಾರಿಗಳೊಂದಿಗೆ ನೀವು clarify ಮಾಡಿಕೊಳ್ಳಿ, ಜಿಲ್ಲಾ ಪಂಚಾಯಿತಿಯ ಸಿ.ಇ.ಓ. ಗೆ ಒಂದು ಕೋಟಿ ರೂಪಾಯಿಗಳು ಬಂದಿರುವುದು ಸತ್ಯ, ನಮಗೂ ಗೊತ್ತಿದೆ. ಆದರೆ ಒಂದು ಕೋಟಿ ರೂಪಾಯಿಗಳು task force ಗೆ ಬಂದಿಲ್ಲ.

ಅಧ್ಯಕ್ಷರು:- ನಿಮ್ಮ ಉತ್ತರವನ್ನು ಪೂರೈಸಿ. Please ಕುಳಿತುಕೊಳ್ಳಿ.

ಶ್ರೀ ಹೆಚ್.ಕೆ. ಪಾಟೀಲ್:- ದಿನಾಂಕ 28.03.2015 ರಂದು ಶಾಸಕರೆಲ್ಲಾ ತಮ್ಮ ಕ್ಷೇತ್ರಕ್ಕೆ ಹೋಗಿರುತ್ತಾರೆ. ನಾನು ನಿಮ್ಮ ಎಲ್ಲಾ Task Force ಕಾರ್ಯದರ್ಶಿಗಳಿಗೆ ಅಂದು ನಿಮ್ಮನ್ನು consult ಮಾಡಿ. time fix ಮಾಡಿ, 28ನೇ ತಾರೀಖಿನಂದು ಸಭೆಯನ್ನು ಕರೆಯಬೇಕು. ಆಮೇಲೆ ದಿನಾಂಕ 26.04.2014 ರಿಂದ ಏನೇನು ಹಣ ಬಂದಿತು? ಏನೇನು ಖರ್ಚು ಮಾಡಿದಿರಿ? ಏನೇನು ಅದರಲ್ಲಿ ಉಳಿದಿದೆ? ಎಂಬುದರ ಬಗ್ಗೆ ಅಂದಿನ ಅಜೆಂಡಾದಲ್ಲಿ first subject ಆಗಿ discussion ಮಾಡಿ ಮುಂದಿನ ಕೆಲಸವನ್ನು ಮಾಡಿ ಎಂದು ಸೂಚನೆ ಕೊಡುತ್ತೇನೆ. ಆವತ್ತಿನ proceedings ಅನ್ನು ತಕ್ಷಣವೇ 24 ತಾಸಿನಲ್ಲಿ ಅಂದರೆ, ಮತ್ತೆ ನಾವು 30ನೇ ತಾರೀಖಿನಂದು ಸದನದಲ್ಲಿ ಸೇರುತ್ತೇವಲ್ಲಾ, ಅಷ್ಟರೊಳಗೆ ಕಳುಹಿಸಿ ಎಂದು ಹೇಳುತ್ತೇವೆ. ಆವತ್ತ ನಿಮಗೆ ಎಷ್ಟು ಹಣವಿದೆ, ಹಣವಿಲ್ಲ ಎಂಬ ಬಗ್ಗೆ ನಾವು ಮತ್ತು ನೀವು, 30ನೇ ತಾರೀಖಿನಂದು ಇಲ್ಲಿ ಮತ್ತೆ ಸೇರಿದಾಗ, ಸ್ಪಷ್ಟವಾಗುತ್ತದೆ. ಅದಕ್ಕೆ ಬೇಕಾಗಿರುವಂತಹ ಜಿಲ್ಲಾವಾರು ಉಳಿಕೆ ಏನಿದೆ, ಅದರ ಪಟ್ಟಿಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು:- O.K., ಆಯಿತು. ಸಾಕು.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಅದು ಕೂಡ ಬರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಆಯಿತು ಸಾಕು.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- ನಿಮ್ಮಲ್ಲಿ ಇರುವುದನ್ನು ಖರ್ಚು ಮಾಡಿ. ಉಳಿದದ್ದನು ಮತ್ತೆ review ಮಾಡೋಣ. ಇಷ್ಟು ಹೇಳಿ ಈ ಕುಡಿಯುವ ನೀರಿನ ವಿಚಾರವಾಗಿ ವಿವರವಾಗಿ ಬಜೆಟ್‌ನಲ್ಲಿ ಉತ್ತರ ಕೊಡುವಾಗ ಹೇಳೋಣ.

(ಗೊಂದಲ)

ಅಧ್ಯಕ್ಷರು:- ಇನ್ನೊಂದು ವಿಷಯವೇನೆಂದರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದರು. ಕುಡಿಯುವ ನೀರಿಗೆ ಎಂದು ಪ್ರತ್ಯೇಕವಾಗಿ ಒಂದು division ಮಾಡಿದ್ದರಲ್ಲಾ, ಅಲ್ಲಿ ಇಂಜಿನಿಯರ್ ಕೊರತೆಯಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಎಲ್ಲೆಲ್ಲಿ ಅವಶ್ಯಕತೆಯಿದೆ, ಅಲ್ಲಿ ಕೊನೆಯ ಪಕ್ಷ ಗುತ್ತಿಗೆ ಆಧಾರದ ಮೇಲಾದರೂ ತೆಗೆದುಕೊಂಡು ಇಂಜಿನಿಯರ್‌ಗಳನ್ನು ಕೊಡಿ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಸಂಬಳ ಹಾಗೂ ಸಿಬ್ಬಂದಿಯ ಕೊರತೆಯಿದೆ ಅದನ್ನೂ ಸಹ ಹೇಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಚಾರವಾಗಿ ಬಹಳಷ್ಟು ಟಿಪ್ಪಣಿಯನ್ನು ಮಾಡಿದ್ದಾರೆ.

ನಾನು ಒಂದು ವಿಷಯವನ್ನು ಒಪ್ಪುತ್ತೇನೆ. ಪಗಾರ ಕೊಡುವುದರಲ್ಲಿ ಅಂದರೆ ಸಂಬಳ ಕೊಡುವುದರಲ್ಲಿ ತಾಂತ್ರಿಕ ಕಾರಣವೋ ಅಥವಾ ಯಾವುದೋ ಕಾರಣಕ್ಕಾಗಿ ವಿಳಂಬವಾಗಿದೆ, ಅದನ್ನು ಒಪ್ಪಬೇಕಾಗುತ್ತದೆ. ಅದರ ನೋವು ನಮಗೆ ಇದೆ. ಆದರೆ, ತಮ್ಮ ಗಮನಕ್ಕೆ ತರುವುದು ಏನೆಂದರೆ, ಆ ಸಮಸ್ಯೆ ಬಗೆಹರಿದಿದೆ. ಬಹುಶಃ ಈ ತಿಂಗಳ 30ರೊಳಗೆ ಅವರದು ಏನು ಬಾಕಿ ಸಂಬಳಗಳು ನಿಂತಿವೆ. ಅವನ್ನೆಲ್ಲಾ ನಾವು ಬಿಡುಗಡೆ ಮಾಡುತ್ತೇವೆ.

ಅಧ್ಯಕ್ಷರು:- O.K., ಈಗ ಚರ್ಚೆ ಮುಕ್ತಾಯವಾಗಿದೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಿ ಪುನ: ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)

(ಭೋಜನ ವಿರಾಮದ ಮಧ್ಯಾಹ್ನ 3 ಗಂಟೆ 24 ನಿಮಿಷಕ್ಕೆ ಸದನ ಪುನರಾಂಭಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು:- ಈಗ ಆಯವ್ಯಯದ ಮೇಲೆ ಚರ್ಚೆ.

(ಗೊಂದಲ)

ಶ್ರೀ ವಿ. ಸುನೀಲ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಅವರಲ್ಲಿ ಬೆಳಿಗ್ಗೆ ಇದ್ದ ಪೌರುಷ, ಈಗ ಕಾಣಿಸುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಈಗ ವಿತ್ತೀಯ ಕಾರ್ಯಕಲಾಪಗಳು. ಮಾನ್ಯ ಕಾರಜೋಳರವರೆ, ಮಾತನಾಡಿ.

(ಗೊಂದಲ)

ಶ್ರೀ ಲಕ್ಷ್ಮಣ ಎಸ್. ಸವದಿ:- ವಿ. ಸುನೀಲ್‌ಕುಮಾರ್‌ರವರೆ, ಅವರು ಬೆಳಿಗ್ಗೆ ಹೇಳಿದ್ದು ಏನು? ಮಧ್ಯಾಹ್ನದವರೆಗೆ ಇರಬೇಕೆಂದು instruction ಕೊಟ್ಟಿದ್ದರು. ಮಧ್ಯಾಹ್ನದ ಮೇಲೆ ಎಂದು ಅಲ್ಲ. ಅವರು ಮಧ್ಯಾಹ್ನದವರೆಗೆ ಇರಬೇಕು ಎಂದು ಹೇಳಿದ್ದರು. ತಾವು ಮಧ್ಯಾಹ್ನದ ಮೇಲೆ ಕೇಳಿದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಗೋವಿಂದ ಕಾರಜೋಳರವರೆ, ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ಈ soda gas spirit ಎಂದು ಹೇಳುತ್ತೇವೆ. ಅದು ನಿಮಗೆ ಗೊತ್ತಿದೆಯೇ? ಸೋಡಾ ಒಡೆಯಬೇಕಾದರೆ ಮಾತ್ರ ಅದು ಟುಸ್ ಎಂದು ಶಬ್ದ ಮಾಡಿಕೊಂಡು ಬರುತ್ತದೆ. ಆಮೇಲೆ ಅದು ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಕಾರಜೋಳರವರೆ, ಮಾತನಾಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ .....

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ರವಿಯವರೆ, ಮಾನ್ಯ ಕಾರಜೋಳರವರು ಮಾತನಾಡುವುದಕ್ಕೆ ನಿಂತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ನರೇಂದ್ರಸ್ವಾಮಿಯವರೆ, ನಿಮ್ಮ ಬಗ್ಗೆ ನಾನು ಏನೂ ಹೇಳಲಿಲ್ಲ. ನೀವು soda gas spirit ಎಂದು ನಾನು ಹೇಳಲೇ ಇಲ್ಲ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- 5 ದಿವಸದ ಟುಸ್ ಏನು ಎಂದು ಜಗತ್ತಿಗೆ ಗೊತ್ತಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ರವಿಯವರೆ, ಅವರು ಮಾತನಾಡಲಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ಉಪಾಧ್ಯಕ್ಷರೆ, ನಾನು ಅವರ soda gas spirit ಬಗ್ಗೆ ಹೇಳಲೇ ಇಲ್ಲ. Known fact ಅದು. ಅದನ್ನು ಏಕೆ ಹೇಳಬೇಕು?

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ರವಿಯವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆ ಇದ್ದವರು ಈಗ ಯಾರೂ ಇಲ್ಲ. ಅವರಿಗೆ hopes ಇಲ್ಲ. ಈಗ ಮಧ್ಯಾಹ್ನದ ಮೇಲೆ ಯಾರು ಬಂದಿದ್ದಾರೆ, ಅವರು ಏನೋ ಮುಂದೆ ಆಗಬೇಕೆಂಬ hopes ನಿಂದ ಬಂದಿದ್ದಾರೆ. ಅವರಿಗೆ ಈ ರೀತಿ ಮಾಡಿದರೆ ಹೇಗೆ? ಅವರಿಗೆ ಏನೋ ಒಂದು ಆಸೆ, hopes ಇದೆ. ಮಧ್ಯಾಹ್ನ ಬಂದವರು ಸ್ವಲ್ಪ hopes ಇಟ್ಟುಕೊಂಡು ಬಂದಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಕಾರಜೋಳರವರೆ, ಮಾತನಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಬಜೆಟ್ ಸರ್ಕಾರದ ಕಡೆಯಿಂದ initiate ಆಗುವುದಿಲ್ಲವೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ...

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮದ್ದು point of order ಇದೆ. ಸರ್ಕಾರ ಕಡೆಯಿಂದ ಬಜೆಟ್ initiate ಆಗುವುದಿಲ್ಲವೇ?

ಉಪಾಧ್ಯಕ್ಷರು:- ಆಗಿದೆ. Initiate ಮಾಡಿದ್ದಾರೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಮುಖ್ಯಮಂತ್ರಿಗಳೇ ಮಾತನಾಡಿರುವುದರಿಂದ ಅದಕ್ಕೆ initiation ಇಲ್ಲವೇ? ಮಾನ್ಯ ಮುಖ್ಯಮಂತ್ರಿಗಳು propose ಮಾಡಿದ್ದಕ್ಕೆ . . . .

(ಗೊಂದಲ)

ಉಪಾಧ್ಯಕ್ಷರು:- ನೀವು initiate ಮಾಡಬೇಕಲ್ಲಾ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ:- ನಮಗೆ ಗೊತ್ತಿದೆ. ಅವರು ಉತ್ತರ ಹೇಳಲಿ.

ಉಪಾಧ್ಯಕ್ಷರು:- ನೀವು discussion initiate ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಅದು ಹಾಗಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ proposal ಗೆ ಯಾರಾದರೂ second ಮಾಡಿ ಮಾತನಾಡುವವರು ಸರ್ಕಾರದಲ್ಲಿ ಯಾರು ಇಲ್ಲವೇ? ಮಾನ್ಯ ರಾಯರೆಡ್ಡಿಯವರು ಎಲ್ಲಿದ್ದಾರೆ? Where is the lawyer without fees? Government lawyer without fees in the Assembly Mr. Rayareddy ಎಲ್ಲಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು:- Table ಮಾಡಿದ್ದಾರೆ. ನೀವು discussion initiate ಮಾಡಿ.

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಮುಖ್ಯಮಂತ್ರಿಗಳು ಏಕಾಂಗಿ ಆಗಿದ್ದಾರೆಯೇ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಕಾರಜೋಳರವರೆ, ಮಾತನಾಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಶಿವಮೂರ್ತಿಯವರೆ, ಈಗ ಸಮಯ ಇಲ್ಲ, ತಾವು ಕುಳಿತುಕೊಳ್ಳಿ.

8. ವಿತ್ತೀಯ ಕಾರ್ಯಕಲಾಪಗಳು

2015-16ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಉಪಾಧ್ಯಕ್ಷರೆ, 2015-16ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಸೆಂಬ್ಲಿಯೊಳಗಿನ ಇವತ್ತಿನ ಈ ಸ್ಥಿತಿಗತಿಯನ್ನು ನೋಡಿದಾಗ ನನಗೆ ಒಂದು ಹಳೆಯ ಜೋಕ್ ನೆನಪಾಗುತ್ತಿದೆ. ಒಂದು ಊರಿನಲ್ಲಿ ಒಬ್ಬ ಬೊಮ್ಮಣ್ಣ ಎಂಬುವವನು ಇದ್ದನಂತೆ. ಆತ ಆ ಊರಿನಲ್ಲಿ ಪುಢಾರಿ. ಆತ ಆ ಊರಿನಲ್ಲಿ ಬಹುಸಂಖ್ಯಾತರ ವರ್ಗಕ್ಕೆ ಸೇರಿದವನು. ಆ ಊರಿನಲ್ಲಿರುವ ಇಸ್ಪಿಟ್ ಕ್ಲಬ್‌ಗಳು ಅವನದೇ, Real estate ದಂಧೆಯೂ ಅವನದೇ, ಸಾರಾಯಿ ಅಂಗಡಿಯು ಅವನದೇ, hair cutting saloon ಕೂಡ ಅವನದೇ. ಅವನ ನೇತೃತ್ವದಲ್ಲಿ, ಅವನ ಒಡೆತನದಲ್ಲೇ ಇದೆಲ್ಲಾ